

# ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ

Editor : MARUTI BASAVANTAPPA HOSAMANI

Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

RNI REG No. : KARKAN/2016/75068

SIHI KAHI

KANNADA DAILY MORNING

BAGALKOT

Volume : 08 | Issue : 16 | Friday 19-09-2025 | E-mail : maruti.b.hosamani76@gmail.com | Page: 4 | Price : Rs. 1/-


## ಬಾರಿ ಮಳೆಯಿಂದ ತಾರಾಪೂರ ಆಲಮೇಲ ಹೋಗುವ ರಸ್ತೆ ಸಂಪರ್ಕ ಬಂದ್





**ಸಿಹಿ ಕಹಿ ಸುದ್ದಿ,**

**ಆಲಮೇಲ :** ನಿನ್ನೆ ರಾತ್ರಿ ಸುರಿದ ಭಾರಿ ಮಳೆಯಿಂದಾಗಿ ದೇಶದ ಬೆನ್ನೆಲು ಆಗಿರುವ ರೈತನು ಭೂಮಿಯಲ್ಲಿ ಬೆಳೆದ ಹತ್ತಿ ತೊಗರಿ ಹೆಸರು ಕಬ್ಬು ಬೆಳೆಯುವರೈತರುಸಾಲಶೂಲಮಾಡಿ ಬೀಜ ಎಣ್ಣೆಗೊಬ್ಬರು ಭೂಮಿಗೆ ಹಾಕಿ ರೈತರು ಕೈಕಟ್ಟಿ ಕುಂದ್ರುವ ಪರಿಸ್ಥಿತಿ ನಿರ್ಮಾಣವಾಗಿದೆ ತಿಂಗಳ ಗಟ್ಟಲೆ ಸುರಿತ್ತಿರುವ ಮಳೆಯಿಂದ ರೈತನು ಕಂಗಾಲು ಯಾಗಿದ್ದಾನೆ ನಿನ್ನೆ ಸುರಿದ ಮಳೆಯಿಂದ ಆಲಮೇಲ ಭಾಗದಲ್ಲಿ ತಾರಾಪೂರ, ತಾವರಖೇಡ, ಕಡಣಿ, ಮದನಹಳ್ಳಿ, ಕುರುಬತಹಳ್ಳಿ, ಬ್ಯಾಡಗಿ, ಹಾಳ, ದೇವಣಗಾಂವ ರೈತರ ಬೆಳೆದ ಬೆಳೆಗಳು ಪೂರ್ಣ ಪ್ರಮಾಣದಲ್ಲಿ ಬೆಳೆ ನಾಶ ಆಗಿರುವುದರಿಂದ ಕೂಡಲೇ ಸರಕಾರ ಸೂಕ್ತ ಪರಿಹಾರ ನೀಡಬೇಕು ಎಂದು ರೈತರು ಆಗ್ರಹಿಸಿದರು ಗ್ರಾಮದಲ್ಲಿ ನಿನ್ನೆ ಸುರಿದ ಮಳೆಯಿಂದ ತಾರಾಪೂರ ಗ್ರಾಮದ ರೈತರಾದ ಮುದಿಗೌಡ ಬಿರಾದಾರ ಇವರ ಎಂಟು ಎಕರೆ ಕಬ್ಬು ಬೆಳೆದ ಜಮೀನಕ್ಕ ನೀರು ನುಗ್ಗಿ ರುವುದರಿಂದ ಬೀಮಾಶ್ಯಾ ವಡ್ಡರ ಸುಮಾರು ಐದು ಎಕರೆ ಹತ್ತಿ ನೀರಿನಲ್ಲಿ ಮುನಿಗಿ ಹೋಗಿದೆ ಕಡಣಿ ರೈತರಾದ ಖಾಜಾ ಸಾಬ್ ಮುಲ್ಲಾ ಸುಮಾರು ನಾಲ್ಕು ಎಕ್ಕರೆ ಹತ್ತಿ ಹಾಗೂ ವಾಸಿಸುತ್ತಿರುವ ಪತ್ರಾಸ್ ಶೆಡ್ಡು ಮಳೆ ನೀರು ನುಗ್ಗಿ ರುವುದರಿಂದ ಆಲಮೇಲಕ್ಕೆ ಹೋಗುವ ರಸ್ತೆ ಸಂಪರ್ಕ ಬಂದ್ ಆಗಿರುವುದರಿಂದಬೈಕ್ ಸವಾರರು ನೀರಿನಲ್ಲಿ ದಾಟಲು ಹರ ಸಾಹಸ ಪಟ್ಟರು ಎಂದು ವರದಿಯಾಗಿದೆ.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ರೇವಣಸಿದ್ದಯ್ಯ.ಜಿ ಹೀರೆಮಠ ಆಲಮೇಲ**

## ಮಾನ್ವಿಯ ಮುಸ್ಲಿಮರಿಂದ ಸೀರತ್. ಎ. ಖಾತಿಮೂನ್ – ನಬೀಯ್ಯಿನ್.ಸಮಾರಂಭ





**ಸಿಹಿ ಕಹಿ ಸುದ್ದಿ,**

**ಮಾನ್ವಿ :** ಪ್ರವಾದಿ ಮುಹಮ್ಮದ್ (ಸ. ಅ) ಅವರ 1500 ನೇ. ಜನ್ಮದಿನದ ಅಂಗವಾಗಿ ಅಂಜುಮನ್–ಎ–ಮೆಹದವಿಯಇಸ್ಲಾಮಿಕ್ ಸಮಿತಿ (ರಿ) ಮಾನವಿ ವತಿಯಿಂದ ದಿನಾಂಕ 20/09/2025 ರಂದು ಸಾಯಂಕಾಲ 7:00 ಗಂಟೆಗೆ ನಗರದ ಕರಡಿಗುಡ್ಡ ಸರ್ಕಲ್ ನಲ್ಲಿರುವ ಈದ್ಗಾ ಶಾದಿ ಮಹಲ್ ನಲ್ಲಿ "ಜಾಲ್ಸ–ಎ–ಸೀರತ್–ಎ ಖಾತಿಮೂನ್ ನಬೀಯ್ಯಿನ್ ಮುಹಮ್ಮದ್ ಮುಸ್ತಫಾ (ಸ. ಅ)" ಕಾರ್ಯಕ್ರಮ ಹಮ್ಮಿಕೊಂಡಿದ್ದು, ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜನಾಬ್ ಸೈಯದ್ ಮುಸ್ತಫಾ ಮಿಯಾ ಯೂಸುಫಿ ಸಾಹಬ್ ವಹಿಸಿ ಕೊಳ್ಳಲಿದ್ದಾರೆ. ಈ ಕಾರ್ಯಕ್ರಮಕ್ಕೆ ಮುಖ್ಯ ಅಥಿತಿಗಳಾಗಿ ಹೈದರಾಬಾದಿನಿಂದ ಆಲ್ ಇಂಡಿಯಾ ಮುಸ್ಲಿಂ ಪರ್ಸನಲ್ ಲಾ ಬೋರ್ಡ್ ನ ಸದಸ್ಯರಾಗಿರುವ ಸೈಯದ್ ಮಸೂದ್ ಹುಸೇನ್ ಮುಜುತಾಹಿದಿ ಸಾಹಬ್, ಮಹಾರಾಷ್ಟ್ರದಿಂದ ಸೈಯದ್ ನೂರ್ ಮೊಹಮ್ಮದ್ ತಹಸೀನ್ ಕುಂದುಮೀರಿ ಸಾಹಬ್ ಹಾಗೂ ಸೈಯದ್ ನುಸ್ರತ್ ತನ್ವೀರ್ ಮಿಯಾ ಸಾಹಬ್ ಭಾಗವಹಿಸಲಿದ್ದಾರೆ ಮತ್ತು ಈ ಕಾರ್ಯಕ್ರಮದಲ್ಲಿ ವಿಶೇಷ ಅತಿಥಿಗಳಾಗಿ ಹಜರತ್ ಸೈಯದ್ ಶಾ ಸಜ್ಜದ್ ಹುಸೇನಿ ಮತವಾಲೆ ಸಾಹೇಬ್ ಮಾನ್ವಿ, ಮೌಲಾನಾ ಮೊಹಮ್ಮದ್ ಸಿಕಂದರ್ ಖಾಸ್ಮಿ ಮಾನ್ವಿ ಮತ್ತು ಜಮಾತೆ ಇಸ್ಲಾಂ ಹಿಂದ್ ಅಧ್ಯಕ್ಷರಾದ ಅಬ್ದುಲ್ ರೆಹಮಾನ್ ಸಾಬ್ ಹಾಗೂ ನಗರದ ಎಲ್ಲಾ ಸಮಾಜದ ಹಿರಿಯ ಮತ್ತು ಗಣ್ಯ ವ್ಯಕ್ತಿಗಳು ಭಾಗವಹಿಸಲಿದ್ದಾರೆ. ಕಾರ್ಯಕ್ರಮದಲ್ಲಿ ಮೆಹದವಿ ಸಮಾಜದ ಉತ್ತಮ ಅಂಕಗಳೊಂದಿಗೆ ಉನ್ನತ ಶಿಕ್ಷಣದಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಪ್ರತಿಭಾ ಪುರಸ್ಕಾರವನ್ನು ಮಾಡಲಾಗುತ್ತಿದೆ. ಮಹಿಯಾರಿಗಾಗಿ ಪ್ರತ್ಯೇಕ ಆಸನದ ವ್ಯವಸ್ಥೆ ಮಾಡಲಾಗಿದೆ ಆದ್ಧರಿಂದ ಮಾನ್ಯರು ಸಮಸ್ತ ನಾಗರಿಕರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ಇದನ್ನು ಯಶಸ್ವಿ ಗೊಳಿಸಬೇಕೆಂದು ಸಮಿತಿಯ ಅಧ್ಯಕ್ಷರಾದ ಸಾಬೆರ್ ಪಾಶ ಹಾಗೂ ಸಮಿತಿಯ ಪದಾಧಿಕಾರಿಗಳು ಪತ್ರಿಕಾ ಗೋಷ್ಠಿಯ ಮೂಲಕ ತಿಳಿಸಿದರು.

ಈ ವೇಳೆ ಕಾರ್ಯಕ್ರಮದ ಪೊಸ್ಟರ್ ಗಳನ್ನು ಬಿಡುಗಡೆ ಗೊಳಿಸಲಾಯಿತು.

ಈ ಸಂದರ್ಭದಲ್ಲಿ ನಿಜಾಮ್ ಪಾಶ ಮಿಯಾ, ನಸೀರ್ ಸೌಕಾರ್, ಜಾಕಿರ್ ಮೋಹಿನುದ್ದಿನ್ ತಾಜ್ ಕನ್ಸ್ಟ್ರಕ್ಷನ್, ಶಂಶಿರ್ ಖಾನ್, ಮೊಯಿನ್ ಖಾನ್,

ಫೈರೋಜ್ ಮಿಯಾ, ಅಲೀಮ್ ಪಾಶ, ಹುಸೇನ್ ಪಾಶ ಸಾಬ್, ಅಮ್ಜದ್ ಖಾನ್, ಸುಭಾನ್ ಬೇಗ್, ಅಲ್ಲಾಹ್ ಬಕ್ಷ, ಅಜಾಮ್ ಸಾಬ್, ಸಾಯೀದ್ ಸಾಬ್, ಮುನ್ನುವರ್ ಮಿಯಾ, ಮುನವಾರ್ ಸಾಬ್ ಮತ್ತು ಸಮೀರ್ ಹಾಗೂ ಮುಂತಾದವರು ಉಪಸ್ಥಿತರಿದ್ದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ಹುಸೇನ್.ಭಾಷಾ. ನಕ್ಕುಂದಿ.ಮಾನ್ವಿ**

## ಕಲ್ಯಾಣ ಕರ್ನಾಟಕ ಉತ್ಸವ ವಿಶ್ವಕರ್ಮ ಜಯಂತಿ ಆಚರಣೆ



**ಸಿಹಿ ಕಹಿ ಸುದ್ದಿ,**

**ತಾಯಕನಹಳ್ಳಿ :** ಕೂಡ್ಲಿಗಿ ತಾಲೂಕಿನ ತಾಯಕನಹಳ್ಳಿ ಶ್ರೀ ಗುರು ಕನಕ ವಿದ್ಯಾ ಕೇಂದ್ರ ಶಾಲೆಯಲ್ಲಿ ಬುಧವಾರ ಕಲ್ಯಾಣ ಕರ್ನಾಟಕ ಉತ್ಸವ ಹಾಗೂ ವಿಶ್ವಕರ್ಮ ಜಯಂತಿಯನ್ನು ಆಚರಿಸಲಾಯಿತು. ಮಹತ್ಮಾ ಗಾಂಧೀಜಿ, ಸರದಾರ ವಲ್ಲಭಭಾಯಿ ಪಟೇಲ, ಡಾ, ಬಿ.ಆರ್ ಅಂಬೇಡ್ಕರ್, ವಿಶ್ವಕರ್ಮ ರವರ ಭಾವ ಚಿತ್ರಕ್ಕೆ ಪೂಜೆಯನ್ನು ಸಲ್ಲಿಸಿ, ಧ್ವಜಾರೋಹಣವನ್ನು ನೆರವೇರಿಸಿದರು. ಶಾಲೆಯ ಮುಖ್ಯ ಶಿಕ್ಷಕಿ ಸುನಿತಾ ಗುರುರಾಜ್ ಮಾತನಾಡಿ ಈ ಭಾಗದ ಅನೇಕ ನಾಯಕರು ಸಮಾಜ ಸುಧಾರಕರು ಹೋರಾಟ ಮಾಡಿ 371ಜೆ ಕಲಂಅನ್ನು ಜಾರಿಗೆ ತರುವಲ್ಲಿ ಸಫಲರಾದರು. ಇದರ ಸದುಪಯೋಗವನ್ನು ವಿದ್ಯಾರ್ಥಿಗಳು ಪಡೆಯಬೇಕು ಎಂದರು.

ಈ ಕಾರ್ಯಕ್ರಮದಲ್ಲಿ ಆಡಳಿತ ಮಂಡಳಿಯ ಕಾರ್ಯದರ್ಶಿ ಬಿ ಟಿ ಮಂಜಣ್ಣ, ಶಾಲಾ ಶಿಕ್ಷಕರಾದ ಹಂಪಮ್ಮ ಪೂಜಾರ್, ಮಂಜುಳಾ, ಸುಮಿತ್ರ, ಸರೋಜಾ, ರುದ್ರಮ್ಮ, ಮಮತಾ, ಬಸವರಾಜ್ ಜಿ ಪಿ, ನಿವೃತ್ತಿ ಗ್ರಂಥಪಾಲಕ ಗುರುರಾಜ್ ಹಾಗೂ ಬೋಧ–ಕೇತರ ಸಿಬ್ಬಂದಿ ಮಲ್ಲಿಕಾರ್ಜುನ, ಶಾಂತಪ್ಪ, ವನಜಾಕ್ಷಮ್ಮ ಮತ್ತು ಊರಿನ ಮುಖಂಡರು ಎಲ್ಲ ಮಕ್ಕಳ ಪಾಲಕ ಪೋಷಕರು ಭಾಗವಹಿಸಿದ್ದರು.

**ಹೋಬಳಿ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ಕೆ.ಎಸ್ ವೀರೇಶ್ ಕೆ. ಹೊಸಹಳ್ಳಿ**

## ತತ್ವಪದಕಾರರು, ಪ್ರವಚನಕಾರರಿಂದಲೆ ಸಂಸ್ಕೃತಿ ಶ್ರೀಮಂತ: ಸಮ ಕುಲಾಧಿಪತಿ ಡಾ. ವೈ.ಎಂ. ಜೈಯರಾಜ್

**ವಿಜಯಪುರ :** ದೇವಸ್ಥಾನಗಳಲ್ಲಿ ನಿತ್ಯ ಭಜನೆ ಪದಗಳನ್ನು ಹಾಡಲಾಗುತ್ತದೆ. ಆ ಎಲ್ಲ ಭಜನೆ ಪದಗಳು ತತ್ವಪದಗಳನ್ನೇ ಹೊಂದಿವೆ. ಈ ಭಜನಾ ಮಂಡಳಿಗಳು ಹಳ್ಳಿಗಳಲ್ಲಿ ಇಂದಿಗೂ ತತ್ವಪದಗಳನ್ನು ಜೀವಂತವಾಗಿರಿಸಿವೆ ಎಂದು ಬಿ.ಎಲ್.ಡಿ.ಇ ಸಂಸ್ಥೆಯ ಸಮ ಕುಲಾಧಿಪತಿ ಡಾ. ವೈ.ಎಂ. ಜೈಯರಾಜ್ ಹೇಳಿದರು.

ನಗರದ ಬಿ ಎಲ್ ಡಿ ಇ ಸಂಸ್ಥೆಯಎಸ್ ಬಿ ಕಲಾಮತ್ತುವಿಜ್ಞಾನಮಹಾವಿದ್ಯಾಲಯದಲ್ಲಿ ಬೆಂಗಳೂರಿನ ಸಂತಕವಿ ಕನಕದಾಸ ಮತ್ತು ತತ್ವಪದಕಾರ ಅಧ್ಯಯನ ಕೇಂದ್ರ ಹಾಗೂ ಐ ಕ್ಯೂ ಎ ಸಿ,ಕನ್ನಡ ವಿಭಾಗ, ಎಸ್ ಬಿ ಕಲಾ ಮತ್ತು ಕೆ ಸಿ ಪಿ ವಿಜ್ಞಾನ ಮಹಾವಿದ್ಯಾಲಯದ ಸಹಯೋಗದಲ್ಲಿ ಬುಧವಾರ ಹಮ್ಮಿಕೊಳ್ಳಲಾಗಿದ್ದ ತತ್ವಪದಕಾರ್ತಿಯರ ಲೋಕ ದೃಷ್ಟಿ ಎಂಬ ವಿಷಯದ ಕುರಿತಾದ ಒಂದು ದಿನದ ರಾಷ್ಟ್ರೀಯ ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿದ ಅವರು, ಈ ಭಜನೆಕಾರರು, ತತ್ವಪದಕರಾರು ಹಾಗೂ ಪ್ರವಚನಕಾರರು ಹಳ್ಳಿಗಳಲ್ಲಿ ಇರುವುದರಿಂದಲೇ ಇಂದು ನಮ್ಮ ಸಂಸ್ಕೃತಿ ಶ್ರೀಮಂತವಾಗಿ ಉಳಿದಿದೆ ಎಂದರು.

ಹೇಳಿದಂತೆ ಯಥಾವತ್ತಾಗಿ ಹೇಳಲು ಹಾಗೂ ಬರೆಯಲು ಸಾಧ್ಯವಾಗುವ ಭಾ? ಕನ್ನಡ,ಈಕನ್ನಡಭಾ?ಯತತ್ವಪದಗಳಬಗ್ಗೆ ಸಮಗ್ರ ಅಧ್ಯಯನ ಹಾಗೂ ಸಂಶೋಧನೆ ನಡೆಯಬೇಕು ಎಂದರು.

ಕೇವಲ ಮನುಷ್ಯ ಅಲ್ಲಗಿಡ ಮರಗಳು ಸಹಿತ ಸಂವಹನ ನಡೆಸುತ್ತವೆ ಎನ್ನುವುದು ನಾವು ಅಧ್ಯಯನಗಳಿಂದ ತಿಳಿದುಕೊಂಡಿದ್ದೇವೆ. ಆ ಸಂವಹನಕ್ಕೆ ಭಾ? ಅತೀ ಮುಖ್ಯ. ಅಕ್ಷರಜ್ಞಾನವಿಲ್ಲದ ನಮ್ಮಜಾನಪದರು ತತ್ವಪದಗಳು, ಒಗಟು ಸೇರಿದಂತೆ ವಿವಿಧ ಸಾಹಿತ್ಯವನ್ನು ನಮಗೆ ಜ್ಞಾನವನ್ನಾಗಿ ಧಾರೆ ಎರೆದಿದ್ದಾರೆ. ವಚನ ಸಾಹಿತ್ಯ ಜನಸಾಮಾನ್ಯರು ತಲುಪುವ ಸಾಹಿತ್ಯ. ಸಮಾಜದ ಅಂಕು–ಡೊಂಕುಗಳನ್ನು ತಿದ್ದುವ ಸಲುವಾಗಿ ಶರಣರು ವಚನ ಸಾಹಿತ್ಯವನ್ನು ರಚಿಸಿದರು. ಆಂತಹ ಅಪರೂಪದ ವಚನ ಸಾಹಿತ್ಯವನ್ನು ಉಳಿಸಿ ಜಗತ್ತಿಗೆ ಪರಿಚಯಿಸುವಲ್ಲಿ ಡಾ.ಫ.ಗು.ಹಳಕಟ್ಟಿ ಅವರ ಶ್ರಮವನ್ನು ಮರೆಯುವಂತಿಲ್ಲ ಎಂದರು.

ವಚನಸಾಹಿತ್ಯಜಗತ್ತಿನಲ್ಲಿಸಾಮಾಜಿಕಕ್ರಾಂತಿ ಮೂಡಿಸಿ ಸಾಮಾಜಿಕ ಬದಲಾವಣೆಯನ್ನೇ ಮೂಡಿಸಿತು. ಅದರ ನೆನಪಿಗಾಗಿಯೇ ಬಿ ಎಲ್ ಡಿ ಈ ಆವರಣದಲ್ಲಿ 770 ಲಿಂಗಗಳನ್ನು ಸ್ಥಾಪನೆ ಮಾಡಲಾಗಿದೆ ಎಂದು ಹೇಳಿದರು. ಎಲ್ಲಕ್ಕಿಂತಲೂ ಮುಖ್ಯವಾಗಿ ಹಳ್ಳಿಗಾಡಿನ ಸೊಗಡು, ಸಂಸ್ಕೃತಿ ಶ್ರೀಮಂತಿಕೆಯ ಮೇಲೆ ಬೆಳಕು ಚಲ್ಲುವ ಜಾನಪದ ಸಾಹಿತ್ಯ ಭಾರತ ಶ್ರೀಮಂತ ಸಾಹಿತ್ಯವಾಗಿ ಹೊರ ಹೊಮ್ಮಿತು. ಜೈನ ಸಾಹಿತ್ಯ ವಿಶಾಲವಾಗಿದೆ. ಜೈನ ಕವಿಗಳು ಅಹಿಂಸಾವಾದಿಗಳು. ಜಗತ್ತಿಗೆ ಅಂಹಿಸಾ ಮಾರ್ಗವನ್ನು ತೋರುವಲ್ಲಿ ಜೈನ ಸಾಹಿತ್ಯ ಅತೀ ಮಹತ್ವದ್ದು. ಸಾಮಾಜಿಕ ಕ್ರಾಂತಿಗೆ ಅನೇಕ ಧರ್ಮಗಳು ತಮ್ಮದೇ ಆದ ಕೊಡುಗೆ ನೀಡಿವೆ ಎಂದರು.

ಶಿಶುನಾಳ ಶರೀಫ ತತ್ವಪದಗಳು ಮನುಕುಲದ ಒಳಿತನ್ನು ಹೇಳುತ್ತವೆ. ಶರೀಫರ ಅಜ್ಞಾನದಿಂದ ಸೋರುತ್ತಿದೆ ಮನೆ ಮಾಳಿಗೆ?. ಎನ್ನುವ ತತ್ವಪದ ಹಾಗೂ ಒಗಟುಗಳ ಮೂಲಕ ಸಾಹಿತ್ಯವನ್ನು ರಚಿಸಿ ಜಗತ್ತಿಗೆ ಆಧ್ಯಾತ್ಮದ ಜ್ಞಾನವನ್ನು ನೀಡಿದ್ದಾರೆ ಎಂದು ಹೇಳಿದರು.

ಬೆಂಗಳೂರಿನ ಸಂತಕವಿ ಕನಕದಾಸ ಮತ್ತು ತತ್ವಪದಕಾರ ಅಧ್ಯಯನ ಕೇಂದ್ರದ ಸದಸ್ಯ ಡಾ.ದಸ್ತಗೀರಸಾಬ ದಿನ್ನಿ ಮಾತನಾಡಿ, ಸಂತಕವಿ ಕನಕದಾಸ ಮತ್ತು ತತ್ವಪದಗಳ ಅಧ್ಯಯನ ಕೇಂದ್ರದಲ್ಲಿ ಪುಸ್ತಕ ಪ್ರಕಟಣೆ, ಮಾರಾಟ ನಿರಂತರವಾಗಿ ನಡೆಯುತ್ತಿವೆ. ತತ್ವಪದಗಳ ದಾಖಲೀಕರಣ ನಡೆಯಬೇಕು. ತತ್ವಪದಕಾರ್ತಿಯರು ಬಹಳಷ್ಟು ಕಡಿಮೆ ಇದ್ದಾರೆ. ನಾವು ಅವರನ್ನು ಹುಡುಕುವ ಕೆಲಸ ಮಾಡುತ್ತಿದ್ದೇವೆ. ಜೀವನದ ಮೌಲ್ಯಗಳನ್ನು ಹುಡುಕಿಕೊಟ್ಟಿರುವ ತತ್ವಪದಕಾರ್ತಿಯರನ್ನು ಹುಡುಕು ಕೆಲಸವನ್ನು ನಮ್ಮ ಅಧ್ಯಯನ ಕೇಂದ್ರ ಮಾಡಲಿದೆ ಎಂದರು.



ಈ ವೇಳೆಯಲ್ಲಿ ಮೂರು ಗೋಷ್ಠಿಗಳನ್ನು ನಡೆಸಲಾಯಿತು. ತತ್ವಪದಕಾರ್ತಿಯರ ಕಟ್ಟು ಬಯಸುವ ಸವಾಜ–ಡಾ.ಗುರುಲಿಂಗಪ್ಪದಬಾಲೆ, ತತ್ವಪದಕಕಾರ್ತಿಯರ ತಾತ್ವಿಕಜಿಜ್ಞಾಸೆ– ಡಾ.ಸಂಗಮನಾಥ ಲೋಕಾಪುರ ಹಾಗೂ ತತ್ವಪದಕಾರ್ತಿಯರಕಾಯ ಮತ್ತು ಮನಸ್ಸುಗಳ ಕಲ್ಪನೆ ಎಂಬ ವಿಷಯದ ಕುರಿತು ಡಾ.ಗೌರಮ್ಮ ಎಸ್.ಎಂ ಅವರು ವಿಚಾರವನ್ನು ಮಂಡಿಸಿದರು.

ಈ ಸಂದರ್ಭದಲ್ಲಿ ಆಡಳಿತಾಧಿಕಾರಿ ಪ್ರೊ?ರ. ವಿ.ಎಸ್.ಬಗಲಿ, ಪ್ರಾಚಾರ್ಯೆ ಡಾ. ಆರ್.ಎಂ ಮಿರ್ಧೆ, ಐಕ್ಯೂಎಸಿ ನಿರ್ದೇಶಕ ಡಾ.ಪಿ.ಎಸ್.ಪಾಟೀಲ, ಕನ್ನಡ ವಿಭಾಗ ಮುಖ್ಯಸ್ಥ ಡಾ. ಶ್ರೀನಿವಾಸ ದೊಡಮನಿ, ಡಾ.ಉಷಾದೇವಿ ಹಿರೇಮಠ, ಡಾ. ಆರ್.ಜಿ.ಕಮತರ, ಪ್ರೊ. ಎಸ್.ವಾಯ್. ಅಂಗಡಿ ಮಹಾವಿದ್ಯಾಲಯದ ಇನ್ನಿತರ ಬೋಧಕ ಬೋಧಕೇತರ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಕುಮಾರಿ ಸ್ವಪ್ನಾ ಸಂಗಡಿಗರು ಪ್ರಾರ್ಥಿಸಿದರು.

ಡಾ.ಸುಭಾಸಚಂದ್ರ ಕನ್ನೂರ ಕಾರ್ಯಕ್ರಮ ನಿರೂಪಿಸಿದರು. ಡಾ.ಪಿ.ಎಸ್.ಪಾಟೀಲ ವಂದಿಸಿದರು.

## ಶ್ವೇತಾ ಬಡಿಗೇರಗೆ ಪಿಎಚ್‌ಡಿ

**ವಿಜಯಪುರ :** ಕರ್ನಾಟಕ ರಾಜ್ಯ ಅಕ್ಕಮಹಾದೇವಿಮಹಿಳಾವಿಶ್ವವಿದ್ಯಾನಿಲಯವು ಶ್ವೇತಾ ಲ ಬಡಿಗೇರ ಅವರು ಸಲ್ಲಿಸಿದ್ದ "ಎಂಟ್ರಪ್ರೆನ್ಯೂರಿಯಲ್ ಬಿಹೆವಿಯರ್ ಆಫ್ ರೂರಲ್ ವುಮನ್ ಇನ್ ಡೈರಿ ಫಾಮ್ಸ್ : ಎ ಸ್ಟಡಿ ಆಫ್ ಧಾರವಾಡ ಡಿಸ್ಟ್ರಿಕ್ಟ್" ಕುರಿತು ಸಲ್ಲಿಸಿದ್ದ ಮಹಾಪ್ರಬಂಧಕ್ಕೆ ಪಿಎಚ್‌ಡಿ ಪದವಿ ನೀಡಿದೆ. ಶ್ವೇತಾ ಲ ಬಡಿಗೇರ ಅವರು ಅರ್ಥಶಾಸ್ತ್ರ ವಿಭಾಗದ ಪ್ರೊ.ಡಿ.ಎಮ್.ಮದರಿ ಅವರ ಮಾರ್ಗದರ್ಶನದಲ್ಲಿ ಸಂಶೋಧನೆ ಕೈಗೊಂಡಿದ್ದರು. ಡಾಕ್ಟರೇಟ್ ಪದವಿ ಪಡೆದಿರುವ ಶ್ವೇತಾ ಲ ಬಡಿಗೇರ ಅವರನ್ನು ಕುಲಪತಿ ಪ್ರೊ.ವಿಜಯಾ ಕೋರಿಶೆಟ್ಟಿ, ಕುಲಸಚಿವ ಶಂಕರಗೌಡ ಸೋಮನಾಳ, ಮೌಲ್ಯಮಾಪನ ಕುಲಸಚಿವ ಪ್ರೊ.ಬಿ.ಎಲ್ ಲಕ್ಕಣ್ಣನವರ ಅಭಿನಂದಿಸಿದ್ದಾರೆ.



## ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳಿಂದ ಗುರುವಂದನೆ

**ವಿಜಯಪುರ :** ತಾಲೂಕಿನ ಉಕ್ಕಲಿ ಗ್ರಾಮದ ಬಿ. ಎಲ್. ಡಿ. ಇ ಸಂಸ್ಥೆಯ ನ್ಯೂ ಇಂಗ್ಲೀಷ್ ಶಾಲೆಯಲ್ಲಿ 1984–85ನೇ ಸಾಲಿನಲ್ಲಿ ಎಸ್. ಎಸ್.ಎಲ್.ಸಿ. ಮುಗಿಸಿದ ವಿದ್ಯಾರ್ಥಿಗಳಿಂದ ಗುರುವಂದನ ಕಾರ್ಯಕ್ರಮ ಹಾಗೂ ಹಳೆಯ ವಿದ್ಯಾರ್ಥಿಗಳ ಸ್ನೇಹ ಸಮ್ಮೇಲಿನ ಕಾರ್ಯಕ್ರಮವು ಜರುಗಿತು.

ಕಲಿಸಿದ ಗುರುಗಳಾದ ಎ.ಪಿ ಮಂಟ್ಯಾಳ, ಬಿ.ಜಿ. ಮನಗೂಳಿ, ಎಂ.ಆರ್. ಬೋಡಕೆ ಹಾಗೂ ಬಿ.ಸಿ. ಡಿಗ್ಗಾವಿ ಗುರುಮಾತೆಯವರನ್ನು ಸಾರೋಟದ ಮೂಲಕ ಮೆರವಣಿಗೆಯಲ್ಲಿ ಕಾರ್ಯಕ್ರಮಕ್ಕೆ ಬರಮಾಡಿಕೊಳ್ಳಲಾಯಿತು.

ಕಾರ್ಯಕ್ರಮದ ದಿವ್ಯ ಸಾನ್ನಿಧ್ಯವನ್ನು ಉಕ್ಕಲಿ ಹಾಗೂ ಯರನಾಳ ವಿರಕ್ತಮಠದ ಮ. ನ. ಪ್ರ ಶ್ರೀ ಗುರು ಸಂಗನಬಸವ ಮಹಾಸ್ವಾಮಿಗಳು ವಹಿಸಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಎ.ಎಮ್. ಪಾಟೀಲ ಅವರು ವಹಿಸಿದ್ದರು. ಕಾರ್ಯಕ್ರಮದಲ್ಲಿ ತೋಟಪ್ಪ ವಾಲಿ, ಸಲಬಯ್ಯ ಸಂಗಮದ, ಬಸು ಜಮಖಂಡಿ,

ಅರವಿಂದ ದೊಡಮನಿ,

ನಿಂಗು ಮಸಳಿ ಹಾಗೂ ಊರಿನ ಗಣ್ಯರು ಹಾಗೂ ಹಿರಿಯರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಎಚ್. ಎಲ್. ಪಾಂಡುಗೋಳ ಸ್ವಾಗತಿಸಿದರು.

ರೇಖಾ ಹಾರಿವಾಳ ನಿರೂಪಿಸಿದರು.

ವಿಶ್ವನಾಥ ಅಂಗಡಿ ವಂದಿಸಿದರು.



# ಮೊರಾರ್ಜಿ ಶಾಲೆಯ ಮಕ್ಕಳಿಗೆ 'ಕಳಪೆ ಊಟ'ದ ಭಾಗ್ಯ

**ಕುಷ್ಟಗಿ :** ಸರ್ಕಾರ ಪ್ರತಿವರ್ಷ ಇಲ್ಲಿನ ವಸತಿ ಶಾಲೆಯ ಮಕ್ಕಳಿಗಾಗಿ ಲಕ್ಷಾಂತರ ಹಣ ಖರ್ಚು ಮಾಡುತ್ತಿದೆ. ಆದರೆ, ಗುಣಮಟ್ಟದ ಊಟಕ್ಕೂ ಪರದಾಡಬೇಕಾಗಿದೆ. ಮಕ್ಕಳ ಹೊಟ್ಟೆ ಮಾತ್ರ ತುಂಬುತ್ತಿಲ್ಲ. ತುಟಿಬಿಚ್ಚಿದರೆ ವಾರ್ಡನ್ ಗದರಿಸುತ್ತಾರೆ.

ವಸತಿ ಶಾಲೆಯಿಂದ ಹೊರಗೆ ಹಾಕಿದರೆ' ಎಂಬ ಹೆದರಿಕೆಯಿಂದಾಗಿ ಸಮಸ್ಯೆ ಬಗ್ಗೆ ಯಾರ ಮುಂದೆ ಹೇಳಿಕೊಳ್ಳುವಂತೆಯೂ ಇಲ್ಲ; ಅನುಭವಿಸಲೂ ಆಗುತ್ತಿಲ್ಲ. 'ಕಳಪೆ ಊಟ'ದ ಭಾಗ್ಯದ ಕರುಣಾಜನಕ ಕಥೆಯನ್ನು ಮಕ್ಕಳ ಕಣ್ಣುಗಳೇ ಹೇಳುತ್ತಿವೆ.

ತಾಲ್ಲೂಕಿನ ಹಿರೇಬನ್ನಿಗೋಳ ಗ್ರಾಮದ ಬಳಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗೆ ಸೇರಿದ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಮಕ್ಕಳು ಗುಣಮಟ್ಟದ ಊಟ ಸಿಗದೇ ನಿತ್ಯ ಅನುಭವಿಸುವ ನೋವಿನ ಸಂಗತಿ ಇದು. ಇಲ್ಲಿನ ಇಡೀ ವ್ಯವಸ್ಥೆ ವಾರ್ಡನ್ ಮೇಲೆ ನಿಂತಿದೆ. ಅಧಿಕಾರವಿದ್ದರೂ ಇಲ್ಲಿ ಪ್ರಾಚಾರ್ಯರು ಅಸಹಾಯಕರು. ವಾರ್ಡನ್ ಹೇಳಿದಂತೆ, ಕೊಟ್ಟಷ್ಟು ಆಹಾರ ಪದಾರ್ಥಗಳಲ್ಲೇ ಅಡುಗೆ ಸಿಬ್ಬಂದಿ ಆಹಾರ



ಬೇಯಿಸಬೇಕಾದ ಪರಿಸ್ಥಿತಿ ಇದೆ.

ಮಕ್ಕಳು ಊಟ ಮಾಡದಿದ್ದರೆ ಅಡುಗೆಯವರನ್ನೇಹೊಣೆಮಾಡಲಾಗುತ್ತಿದೆ. ಐದು ವರ್ಷಗಳಿಂದ ಈ ಸಮಸ್ಯೆಯಿದ್ದರೂ ಮೇಲಧಿಕಾರಿಗಳು ಗಮನಹರಿಸಿಲ್ಲ. ವಾರ್ಡನ್ ಧೋರಣೆಯಿಂದ ಬೇಸತ್ತ ಅಡುಗೆ ಸಿಬ್ಬಂದಿ ಗುರುವಾರ ಅಡುಗೆ ಮಾಡದೇ ಪ್ರತಿಭಟಿಸಿದ್ದು ಅಲ್ಪಸಂಖ್ಯಾರ ಕಲ್ಯಾಣ ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿಗಳಿಗೂ 'ಬಿಸಿ' ಮುಟ್ಟಿಸಿತು.

**ಆಗಿದ್ದೇನು:** 6ರಿಂದ 10ನೇ ತರಗತಿವರೆಗಿನ ಈ ವಸತಿ ಶಾಲೆಯಲ್ಲಿ 271 ಮಕ್ಕಳಿದ್ದಾರೆ. ಚಹಾ, ಮೊಸರು, ಮಜ್ಜಿಗೆ ಎಲ್ಲವನ್ನೂ 34 ಲೀಟರ್ ಹಾಲಿನಲ್ಲಿ ಮಾಡಬೇಕು. ಅಷ್ಟೂ ಮಕ್ಕಳ ಉಪಾಹಾರಕ್ಕೆ ಒಂದೆರಡು ಕೆಜಿ ತರಕಾರಿ, ಅರ್ಧ ಲೀಟರ್ ಎಣ್ಣೆ, ಒಂದು ಲೀಟರ್ ಖಾದ್ಯತೈಲದಲ್ಲಿ ಮಧ್ಯಾಹ್ನ ಮತ್ತು ರಾತ್ರಿಗೆ ಸಾಂಬಾರ್ ಮಾಡಬೇಕು. ಮಾರುಕಟ್ಟೆಯಲ್ಲಿ ಯಾರೂ ಕೇಳದ ಒಂದು ಕೆ.ಜಿ. ಹುಳುಬಿದ್ದ ಕಳಪೆ ಸೌತೆ, ಬದನೆಕಾಯಿ ನೀಡಲಾಗುತ್ತಿದೆ. ಜೊಂಡುಗಟ್ಟಿದ, ಅಲ್ಪ ಪ್ರಮಾಣದ ಖಾರದಪುಡಿ, ಬಂಡಾರಕ್ಕೆ ಬಳಸುವ ನಾಲ್ಕೈದು ಚೀಲ ಅರಿಸಿನಪುಡಿ ಕೊಡಲಾಗುತ್ತಿದೆ.

ಇದರಿಂದ ಬೇಸತ್ತು ಅಡುಗೆ ಸಿಬ್ಬಂದಿ ಪ್ರತಿಭಟನೆಯ ಹಾದಿ ಹಿಡಿದಿದ್ದಾರೆ. ಸರ್ಕಾರ ಉದಾರವಾಗಿ ಅನುದಾನ ನೀಡುತ್ತಿದ್ದರೂ ಇಲ್ಲಿನ ಮಕ್ಕಳಿಗೆ ಮಾತ್ರ ಆಹಾರದಲ್ಲಿಬಡತನ.ನೀರೇಇಲ್ಲಿಸಾಂಬಾರ್. ಕೊಳೆತ ಮೊಟ್ಟೆಗಳ ಸರಬರಾಜಾಗುತ್ತಿವೆ. ಸರ್ಕಾರ ಪ್ರತಿ ಮಗುವಿಗೆ ತಿಂಗಳಿಗೆ 1,850 ಅನುದಾನ ಕೊಡುತ್ತಿದ್ದರೂ ಗುಣಮಟ್ಟದ ಆಹಾರದಿಂದ ಮಕ್ಕಳು ವಂಚಿತರಾಗುತ್ತಿದ್ದಾರೆ. ಲಕ್ಷಾಂತರ ರೂಪಾಯಿ ದುರ್ಬಳಕೆಯಾಗುತ್ತಿದೆ ಎಂಬ ಆರೋಪಗಳು ವಸತಿ ಶಾಲೆಗೆ ಬಂದಾಗ ಕೇಳಿಬಂದವು.

# ಕಸ ಹಾಕುವ ಸ್ಥಳಗಳಲ್ಲಿ ರಂಗೋಲಿ ಬಿಡಿಸಿ ಜಾಗೃತಿ



**ಕೊಪ್ಪಳ :** ನಗರದ ಪ್ರಮುಖ ವೃತ್ತ ಹಾಗೂ ಕೂಡು ರಸ್ತೆಗಳಲ್ಲಿ ಕಸ ಹಾಕುವ ಸ್ಥಳಗಳನ್ನು ಗುರುತಿಸಿರುವ ನಗರಸಭೆ ಸಿಬ್ಬಂದಿ ಪ್ರಧಾನ ಅಂಚೆ ಕಚೇರಿ ಹತ್ತಿರದ ರಸ್ತೆಯಲ್ಲಿ ಗುರುವಾರ ಕಸ ಹಾಕುವುದು ತಡೆಯಲು ರಂಗೋಲಿ ಅರಳಿಸಿ ಜಾಗೃತಿ ಮೂಡಿಸಿದರು.

ನಗರದ ಆರೇಳು ಕಡೆ ಇಂಥ ಸ್ಥಳಗಳನ್ನು ಗುರುತಿಸಿದ್ದು ಕಸ ಹಾಕಿದ್ದ ಅಲ್ಲಿನ ಸ್ಥಳವನ್ನು ಸ್ವಚ್ಛಗೊಳಿಸಿ ರಂಗೋಲಿ ಹಾಕಿ ಕಸ ಎಲ್ಲೆಂದರಲ್ಲಿ ಚೆಲ್ಲದಂತೆ ಜನರಿಗೆ ಮನವಿ ಮಾಡಿದರು.

ನಗರದಲ್ಲಿ ಮನೆ ಹಾಗೂ ಅಂಗಡಿಗಳಿಂದ ಸಂಗ್ರಹವಾಗುವ ಕಸವನ್ನು ಹಸಿ, ಒಣ, ನೈರ್ಮಲ್ಯ ತ್ಯಾಜ್ಯ, ಎಲೆಕ್ಟ್ರಾನಿಕ್ ತ್ಯಾಜ್ಯ, ಬಯೋಮೆಡಿಕಲ್ ತ್ಯಾಜ್ಯ ಹೀಗೆ ಐದು ಬಗೆಯಲ್ಲಿ ವಿಂಗಡಿಸಿ ನೀಡುವಂತೆ ಹನ್ನೊಂದು ಮಹಿಳೆಯರು ಸಮುದಾಯ ಸಂಘಟಕರಾಗಿ ನೇಮಕಗೊಂಡು ಮನೆಮನೆಗೆ ತೆರಳಿ ತಿಳಿವಳಿಕೆ ಮೂಡಿಸಿದರು.

ಗುರುವಾರ ನಡೆದ ಬ್ಲಾಕ್ ಸ್ಪಾಟ್ ನಿರ್ಮೂಲನೆ ಕಾರ್ಯಕ್ರಮದಲ್ಲಿ ನಗರಸಭೆ ನೂತನ ಪೌರಾಯುಕ್ತ ವೆಂಕಟೇಶ ನಾಗನೂರ, ಸದಸ್ಯರಾದ ಪರಶುರಾಮ ಮೇದಾರ, ವ್ಯವಸ್ಥಾಪಕ ಮುನಿಸ್ವಾಮಿ, ಆರೋಗ್ಯ ನಿರೀಕ್ಷಕರಾದ ಲಾಲಸಾಬ್ ಮನಿಯಾರ್, ರಾಘವೇಂದ್ರ ಚೌಹಾಣ್, ವಿಶ್ವನಾಥ ಯಾದವ್ ಸೇರಿದಂತೆ ಅನೇಕರು ಪಾಲ್ಗೊಂಡಿದ್ದರು.

# ಹೊಸ ಕಾರ್ಖಾನೆ ಸ್ಥಾಪನೆಗೆ ನಾಗರಿಕ ಸಮಿತಿ ವಿರೋಧ

**ಕೊಪ್ಪಳ :** ಕೊಪ್ಪಳ ಸುತ್ತಮುತ್ತಲಿನ ಪರಿಸರದಲ್ಲಿ ಹೊಸ ಉಕ್ಕಿನ ಕಾರ್ಖಾನೆ ಸ್ಥಾಪನೆಗೆ ಮುಂದಾಗುತ್ತಿರುವ ಸರ್ಕಾರದ ಧೋರಣೆಗೆ ಗಿಣಿಗೇರಾ ನಾಗರಿಕ ಹೋರಾಟ ಸಮಿತಿಯು ತೀವ್ರ ವಿರೋಧ ವ್ಯಕ್ತಪಡಿಸಿದೆ.

ತಾಲ್ಲೂಕಿನ ಗಿಣಿಗೇರಾ, ಅಲ್ಲಾನಗರ, ಬೇವಿನಹಳ್ಳಿ, ಕನಕಾಪುರ, ಹಿರೇಬಗನಾಳ, ಹಿರೇಕಾಸನಕಂಡಿ, ಹಾಲವರ್ತಿ ಹೀಗೆ ಅನೇಕ ಗ್ರಾಮಗಳಿಗೆ ಹೊಂದಿಕೊಂಡು ಸಾಕಷ್ಟು ಕಾರ್ಖಾನೆಗಳಿದ್ದು, ಮತ್ತೊಂದು ಕಾರ್ಖಾನೆಗೆ ಆಹ್ವಾನಿಸುತ್ತಿರುವುದು ಈಡೀ ಜಿಲ್ಲೆಯನ್ನೆ ಸಂಪೂರ್ಣ ಹಾಳುಮಾಡಲು ಹೊರಟಂತಿದೆ ಎಂದು ಮನವಿಯಲ್ಲಿ ಕಳವಳ ವ್ಯಕ್ತಪಡಿಸಿದ್ದಾರೆ.

ತುಂಗಭದ್ರಾ ನೀರಿಗಾಗಿ ವಿವಿಧ ಕಂಪನಿಗಳು ಮುತ್ತಿಕೊಳ್ಳುತ್ತಿವೆ. ಭವಿಷ್ಯತ್ತಿನಲ್ಲಿ ಕುಡಿಯಲು ನೀರಿಲ್ಲದಂತಾಗುತ್ತದೆ. ಅಲ್ಲದೇ ಪರಿಸರವು ಕೂಡಾ ಹಾಳಾಗಿ ಉಸಿರಾಟಕ್ಕೆ ಶುದ್ಧಗಾಳಿ ಇಲ್ಲದಂತಾಗುತ್ತದೆ. ಫಲವತ್ತಾದ ಕೃಷಿಭೂಮಿಯನ್ನು ಕಳೆದುಕೊಂಡು ರೈತರು ಉದ್ಯೋಗಕ್ಕಾಗಿ ರಾಜ್ಯಬಿಟ್ಟ ಮತ್ತೊಂದು ರಾಜ್ಯಕ್ಕೆ ಹೋಗುವ ಪರಿಸ್ಥಿತಿ



ನಿರ್ಮಾಣವಾಗಲಿದೆ. ಮುಗ್ಧ ರೈತರವನ್ನು ವಂಚಿಸಿ ಭೂಮಿಯನ್ನು ಕಬಳಿಸುವ ವ್ಯವಸ್ಥೆ ಜಿಲ್ಲೆಯಲ್ಲಿ ವ್ಯವಸ್ಥಿತವಾಗಿಯೇ ಕಾರ್ಯನಿರತವಾಗಿದೆ' ಎಂದು ಅಸಮಾಧಾನ ವ್ಯಕ್ತಪಡಿಸಿದೆ.

ಈ ಎಲ್ಲ ಕಾರಣಗಳಿಂದ ಕೊಪ್ಪಳ ವ್ಯಾಪ್ತಿಯ ಜನರು ತೀವ್ರ ವಿರೋಧಕ್ಕಾಗಿ ಮುಂದೆಬರಬೇಕಾದ ಅನಿವಾರ್ಯತೆಯಿದೆ. ಇಲ್ಲಿಯ ಜನರ ಅಸ್ತಿತ್ವ ಮತ್ತು ನೆಮ್ಮದಿಯ ಜೀವನಕ್ಕಾಗಿ ಕಾರ್ಖಾನೆಗಳ ಆಗಮಿಸುವಿಕೆಯನ್ನು ತಡೆಗಟ್ಟಬೇಕಾಗಿದೆ. ಈ ಕೂಡಲೇ ಹೊಸ ಕಾರ್ಖಾನೆಗಳ ಸ್ಥಾಪನೆಗೆ ಒಪ್ಪಿಗೆ ನೀಡಿದೇ ಪ್ರಸ್ತಾವನೆಯನ್ನು ತಿರಸ್ಕರಿಸಬೇಕು' ಎಂದು ಜಿಲ್ಲಾಧಿಕಾರಿಗಳಿಗೆ ಹೋರಾಟ ಸಮಿತಿ ಮುಖಂಡರಾದ ಶರಣು ಗಡ್ಡಿ, ಮಂಗಳೇಶ ರಾತೋಡ್, ಹನುಮಂತ ಕಟಿಗಿ, ಸುರೇಶ ಕಲಾಲ್ ಅವರು ಮಾನವಿ ಮಾಡಿದ್ದಾರೆ.

# ಬೆಟಗೇರಿ: ಶಿಕ್ಷಕರ ದಿನಾಚರಣೆ

**ಅಳವಂಡಿ :** ಸಮೀಪದ ಬೆಟಗೇರಿ ಗ್ರಾಮದ ಸರ್ಕಾರಿ ಪ್ರೌಢಶಾಲೆಯಲ್ಲಿ ಶಿಕ್ಷಕರ ದಿನವನ್ನು ಆಚರಿಸಲಾಯಿತು. ತಾಲ್ಲೂಕು ಪಂಚಾಯಿತಿ ಮಾಜಿ ಸದಸ್ಯ ವೀರೇಶ ಸಜ್ಜನ, ಎಸ್‌ಡಿಎಂಸಿ ಅಧ್ಯಕ್ಷ ಬಸವರಾಜ ನಾಗರೆಡ್ಡಿ ಮಾತನಾಡಿದರು.



ಇದೆ ವೇಳೆ ಗ್ರಾಮಸ್ಥರು ಹಾಗೂ ಮುಖಂಡರು ಶಾಲೆಯ ಶಿಕ್ಷಕರನ್ನು ಸನ್ಮಾನಿಸಿದರು.

ಕಾರ್ಯಕ್ರಮದಲ್ಲಿ ಗ್ರಾಮ ಪಂಚಾಯಿತಿ ಅಧ್ಯಕ್ಷ ದುರುಗಪ್ಪ ಭಜಂತ್ರಿ, ಮುಖ್ಯಶಿಕ್ಷಕ ಪರಶುರಾಮ ಸಾಲ್ಮನಿ, ಶಿಕ್ಷಕರಾದ ಗಿರಿಯಪ್ಪ ಹಾರನಹಳ್ಳಿ, ರಾಜಸಾಹೇಬ್ ಬಳಿಗಾರ, ಮರ್ದಾನಲಿ ಗಡಾದ, ಸುನಿತಾ ಯಾಳಗಿ, ಸೋಮಣ್ಣ, ಪರಶುರಾಮ, ಸೋಮಶೇಖರಯ್ಯ, ನವೀನ್ ಮಾದಿನೂರ, ನಾಗರಾಜ್ ಪಾತ್ರದ, ಶಂಕ್ರಪ್ಪ ಬಡಿಗೇರ, ಮಲ್ಲಪ್ಪ ಚಿಂಚಲಿ ಇದ್ದರು.

# ತೆರಿಗೆಗಳ ಸರಳೀಕರಣ, ಬೆಳವಣಿಗೆಯ ಬಲವರ್ಧನೆ: ಜಿಎಸ್‌ಟಿ 2.0 ಏಕೆ ಗೇಮ್ ಚೇಂಜರ್?
## ಅಡುಗೆಮನೆಯಿಂದ ಬಂಡವಾಳ ಮಾರುಕಟ್ಟೆಗಳವರೆಗೆ: ಜಿಎಸ್‌ಟಿ 2.0 ರ ದೂರಗಾಮಿ ಪರಿಣಾಮ

ಮೋದಿ ಸರ್ಕಾರದ ಪರೋಕ್ಷ ತೆರಿಗೆ ಸುಧಾರಣೆಗಳು ನಾಗರಿಕರ ಮೇಲಿನ ಉತ್ತರದಾಯಿತ್ವ ಮತ್ತು ಎಲ್ಲರನ್ನೂ ಒಳಗೊಂಡಬೆಳವಣಿಗೆಯಬದ್ಧತೆಯನ್ನು ತೋರಿಸುತ್ತವೆ.

**ತೆರಿಗೆ ಸುಧಾರಣೆಯಲ್ಲಿ ದಿಟ್ಟ ಹೆಜ್ಜೆ**

ಆದಾಯ ತೆರಿಗೆಯಲ್ಲಿ ಭಾರೀ ವಿನಾಯಿತಿ ನೀಡಿದ ನಂತರ, ಮೋದಿ ಸರ್ಕಾರವು ಜಿ ಎಸ್ ಟಿ 2.0 ಮೂಲಕ ಪರೋಕ್ಷ ತೆರಿಗೆ ವ್ಯವಸ್ಥೆಯಲ್ಲಿಮತ್ತೊಂದುದಿಟ್ಟಸುಧಾರಣೆ ತಂದಿದೆ. ಯಾವುದೇ ಪ್ರಜಾಪ್ರಭುತ್ವ ಸರ್ಕಾರಕ್ಕೆ ತೆರಿಗೆ ಕಡಿತ ಮಾಡುವುದು ರಾಜಕೀಯವಾಗಿ ಮತ್ತು ಆರ್ಥಿಕವಾಗಿ ಅಪಾಯಕಾರಿ ನಡೆ. ಏಕೆಂದರೆ ಅದು ನೇರವಾಗಿ ಆದಾಯ ಸಂಗ್ರಹದ ಮೇಲೆ ಪರಿಣಾಮ ಬೀರುತ್ತದೆ. ಆದರೂ, ನೇರ ತೆರಿಗೆ ಮತ್ತು ಪರೋಕ್ಷ ತೆರಿಗೆ ಹೀಗೆ ಎರಡು ಪ್ರಮುಖ ಸುಧಾರಣೆಗಳನ್ನು ಶರವೇಗದಲ್ಲಿ ಜಾರಿಗೆ ತರುವ ಮೂಲಕ, ಸರ್ಕಾರವು ಜನರ ಹಿತಾಸಕ್ತಿಗಳೇ ತನ್ನ ಆಡಳಿತದ ಕೇಂದ್ರಬಿಂದು ಎಂದು ತೋರಿಸಿದೆ.

**ವಿರೋಧ ಪಕ್ಷಗಳ ಆರೋಪ ಠ ವಾಸ್ತವ ಸ್ಥಿತಿ**

ನಿರೀಕ್ಷೆಯಂತೆಯೇ, ವಿರೋಧ ಪಕ್ಷದ ನಾಯಕರು ಈ ಸುಧಾರಣೆಯನ್ನು ಅಷ್ಟೇನೂ ಮಹತ್ವದ್ದಲ್ಲ ಎಂದು ಬಿಂಬಿಸಲು ಪ್ರಯತ್ನಿಸಿದ್ದಾರೆ. ಜಿ ಎಸ್ ಟಿ 2.0 ಕೇವಲ ದರಗಳ ಮರುಹೊಂದಾಣಿಕೆ ಎಂದು ಟೀಕಿಸಿದ್ದಾರೆ ಮತ್ತು ಇದ-ರಿಂದ ಜನಸಾಮಾನ್ಯರಿಗೆ ಯಾವುದೇ ನಿಜವಾದ ಪ್ರಯೋಜನವಿಲ್ಲ ಎಂದು ಆರೋಪಿಸಿದ್ದಾರೆ. ಆದರೆ, ಮಾರುಕಟ್ಟೆಯ ಬೆಳವಣಿಗೆಗಳು ಇದ-ಕ್ಕೆ ವಿರುದ್ಧವಾದ ಚಿತ್ರಣ ನೀಡುತ್ತಿವೆ. ಔಷಧ ಕಂಪನಿಗಳು ಈಗಾಗಲೇ ತಮ್ಮ ಉತ್ಪನ್ನಗಳ ಬೆಲೆ ಇಳಿಕೆ ಪ್ರಕಟಿಸಿವೆ. ವಿಮಾ ಸಂಸ್ಥೆಗಳು ಕಡಿಮೆ ಪ್ರೀಮಿಯಂ ಇರುವ ಪಾಲಿಸಿಗಳನ್ನು ನೀಡುತ್ತಿವೆ ಮತ್ತು ಎಫ್ ಎಂ ಸಿ ಜಿ (ಈಒಅಉ) ಕಂಪನಿಗಳು ತಮ್ಮ ಉತ್ಪನ್ನಗಳ ಗರಿಷ್ಠ ಚಿಲ್ಲರೆ ಬೆಲೆ (ಒಖಕ) ಕಡಿಮೆ ಮಾಡಲು ಪ್ರಾರಂಭಿಸಿವೆ. ವಿರೋಧ ಪಕ್ಷದ ಆರೋಪಗಳಿಗೆ ಪ್ರತಿಯಾಗಿ, ಈ ಸುಧಾರಣೆಯು ಜನರ ದೈನಂದಿನ ಜೀವನವನ್ನು ಸುಲಭಗೊಳಿಸಲು ರೂಪಿಸಲಾಗಿದೆ ಎಂಬುದು ಸ್ಪಷ್ಟವಾಗಿ ಕಾಣುತ್ತಿದೆ. ಅಲ್ಲದೆ, ಇದರಿಂದ ಯಾವುದೇ ಆದಾಯ ಕೊರತೆಯಾಗದಂತೆ, ಬೇಡಿಕೆಯ ಹೆಚ್ಚಳ ಮತ್ತುಅಭಿವೃದ್ಧಿಕ್ಷೇತ್ರಗಳವಿಸ್ತರಣೆಯಿಂದ ಅದನ್ನು ಸರಿದೂಗಿಸಲಾಗುವುದು ಎಂದು ಸರ್ಕಾರ ಭರವಸೆ ನೀಡಿದೆ.

**ಕುಟುಂಬಗಳು ಮತ್ತು ಆರೋಗ್ಯ ಕ್ಷೇತ್ರಕ್ಕೆ ನೆರವು**

ಜಿ ಎಸ್ ಟಿ 2.0 ರ ಪ್ರಮುಖ ಪರಿಣಾಮ ನೇರವಾಗಿ ಕುಟುಂಬಗಳ ಬಜೆಟ್ ಮೇಲಾಗಿದೆ. ಈ ಹಿಂದೆ 12–18% ತೆರಿಗೆ ಒಳಪಟ್ಟಿದ್ದ ವಸ್ತುಗಳನ್ನು ಈಗ 5% ಅಥವಾ ಶೂನ್ಯ ತೆರಿಗೆ ವಿಭಾಗ–ಕ್ಕೆ ತರಲಾಗಿದೆ. ಅಡುಗೆಮನೆಯಿಂದ ಹಿಡಿದು ಔಷಧಾಲಯಗಳವರೆಗೆ ಈ ಲಾಭವನ್ನು ಸ್ಪಷ್ಟವಾಗಿ ಕಾಣಬಹುದು. ಕ್ಯಾನ್ಸರ್ ಮತ್ತು ಹೃದಯ ರೋಗಗಳಿಗೆ ಬಳಸುವ ಔಷಧಗಳು ಸೇರಿದಂತೆ ಜೀವ ರಕ್ಷಕ ಔಷಧಗಳನ್ನು ಸಂಪೂರ್ಣವಾಗಿ ತೆರಿಗೆಯಿಂದ ಮುಕ್ತಗೊಳಿಸಲಾಗಿದೆ. ಆರೋಗ್ಯ ವಿಮೆಯ ಪ್ರೀಮಿಯಂಗಳು ಕೂಡ ತೆರಿಗೆಯ ವ್ಯಾಪ್ತಿಯಿಂದ ಹೊರಗಿವೆ. ಟಿವಿ ಮತ್ತು ಎಸಿಗಳಂತಹ ಗೃಹಬಳಕೆಯ ವಸ್ತುಗಳ ತೆರಿಗೆಯನ್ನೂ 28% ನಿಂದ 18% ಗೆ ಇಳಿಸಲಾಗಿದೆ. ಈ ಎಲ್ಲಾ ಕ್ರಮಗಳು, 'ಜನರ ಜೇಬಿನಲ್ಲಿ ಉಳಿತಾಯ' ಮಾಡುವುದೇ ಆರ್ಥಿಕ ಬೆಳವಣಿಗೆಗೆ ಮುಖ್ಯ ಅಡಿಪಾಯ ಎಂಬ ಸರ್ಕಾರದ ವಿಶಾಲ ದೃಷ್ಟಿಕೋನವನ್ನು ಪ್ರತಿಬಿಂಬಿಸುತ್ತವೆ.

**ಬಳಕೆ ಮತ್ತು ಬೇಡಿಕೆಗೆ ಉತ್ತೇಜನ**

ತೆರಿಗೆ ಕಡಿತದಿಂದ ಬೇಡಿಕೆ ಹೆಚ್ಚುತ್ತದೆ ಎಂದು ಅರ್ಥಶಾಸ್ತ್ರಜ್ಞರು ಒಪ್ಪುತ್ತಾರೆ. ಈ ಸುಧಾರಣೆ ಈಗಾಗಲೇ ಮಾರುಕಟ್ಟೆಯಲ್ಲಿ ಹೊಸ ಚೈತನ್ಯ ಮೂಡಿಸಿದ್ದು, ವ್ಯಾಪಾರಿಗಳು ಮತ್ತು ಉತ್ಪಾದಕರು ವ್ಯಾಪಾರ ಚಟುವಟಿಕೆಗಳು ಹೆಚ್ಚುತ್ತಿವೆ ಎಂದುವರದಿಮಾಡಿದ್ದಾರೆ.ಮುಂಬರುವ ಹಬ್ಬದ ವೇಳೆಗೂ ಮುನ್ನ, ಗ್ರಾಹಕರಲ್ಲಿ ಹೊಸನಂಬಿಕೆ ಮೂಡುತ್ತಿರುವ ಆರಂಭಿಕ ಸೂಚನೆಗಳು ಗೋಚರಿಸುತ್ತಿವೆ. ಇದು, ತಳಮಟ್ಟದಿಂದಲೇ ಆರ್ಥಿಕ ಬೆಳವಣಿಗೆಯನ್ನು ಉತ್ತೇಜಿಸುವ ಜಿ ಎಸ್ ಟಿ 2.0 ರ ಉದ್ದೇಶವು ಈಡೇರುತ್ತಿದೆ ಎಂಬುದರ ಸೂಚಕವಾಗಿದೆ.

**ಭಾರತದಯುವಜನತೆಯಸಬಲೀಕರಣ**

ಜಿ ಎಸ್ ಟಿ 2.0 ಕೇವಲ ತೆರಿಗೆ ದರಗಳ ಬಗ್ಗೆ ಮಾತ್ರವಲ್ಲ, ಇದು ಭಾರತದ ಯುವಕರನ್ನು ಸಬಲೀಕರಣಗೊಳಿಸುವ ಒಂದು ರಚನಾತ್ಮಕ ಸುಧಾರಣೆ–ಯಾಗಿದೆ. ಸರಳೀಕೃತ ನಿಯಮಗಳು, ವಿಮೆಯಂತಹ ಅಗತ್ಯ ಸೇವೆಗಳ ಮೇಲಿನ ವಿನಾಯಿತಿಗಳು ಮತ್ತು ಶೈಕ್ಷಣಿಕ ಸಾಮಗ್ರಿಗಳ ಮೇಲೆ ಶೂನ್ಯ ತೆರಿಗೆಯು, ಕಲಿಕೆ ಹಂತದಲ್ಲಿನ ಯುವಕರು ಹಾಗೂ ವೃತ್ತಿಪರರಿಗೆ ಖರೀದಿ ಸಾಮರ್ಥ್ಯವನ್ನು ಹೆಚ್ಚಿಸಿ, ಅವರಿಗೆ ಇದ್ದ ಅಡೆತಡೆಗಳನ್ನು ಕಡಿಮೆ ಮಾಡುತ್ತದೆ. ಡಿಜಿಟಲ್ ಇಂಡಿ–ಯಾ ಮತ್ತು ಆತ್ಮನಿರ್ಭರ ಭಾರತವನ್ನು ಮುನ್ನಡೆಸುತ್ತಿರುವ ಯುವ ಪೀಳಿಗೆಗೆ, ಈ ಸುಧಾರಣೆ ಆರ್ಥಿಕ ನೆರವು ಮತ್ತು ಅವಕಾಶ ಎರಡನ್ನೂ ಒದಗಿಸುತ್ತದೆ.

**ಸ್ಟಾರ್ಟಪ್‌ಗಳುಮತ್ತುಸಣ್ಣಉದ್ಯಮಗಳಿಗೆ ಉತ್ತೇಜನ**

ಸ್ಟಾರ್ಟಪ್ ಗಳು ಮತ್ತು ಎಂ ಎಸ್ ಎಂ ಇ ಗಳು (ಒಖಒಉ) ಈ ಸುಧಾರಣೆಯಿಂದ ಗಮನಾರ್ಹ ಲಾಭ ಪಡೆಯಲಿವೆ. ತೆರಿಗೆ ಹೊರೆ ಕಡಿಮೆಯಾದ ಕಾರಣ, ನಿಯಮಗಳು ಸರಳವಾಗಿವೆ ಮತ್ತು ಸುಲಭವಾಗಿಪಾಲನೆಯಾಗುವುದರಿಂದ, ಸಣ್ಣ ಉದ್ದಿಮೆಗಳು ಕೇವಲ ನಿಯಮ ಪಾಲನೆಗಿಂತ ಹೆಚ್ಚಾಗಿ ನಾವೀನ್ಯತೆಗಳ ಮೇಲೆ ಗಮನ ಕೇಂದ್ರೀಕರಿಸಬಹುದು. ಈ ಸುಧಾರಣೆಯು ಉದ್ಯಮಶೀಲತೆಗೆ ಹೆಚ್ಚು ಪೂರಕ ವಾತಾವರಣವನ್ನು ಸೃಷ್ಟಿಸಿದೆ. ಇದು ಯುವ ಆವಿಷ್ಕಾರಕರು ತಮ್ಮ ಕಲ್ಪನೆಗಳನ್ನು ಉದ್ಯಮಗಳಾಗಿ ಪರಿವರ್ತಿಸಲು ಪ್ರೋತ್ಸಾಹಿಸುತ್ತದೆ, ಜೊತೆಗೆ ಹೆಚ್ಚಿನ ಆರ್ಥಿಕ ಮತ್ತು ಉದ್ಯೋಗಸೃಜನಸುರಕ್ಷತೆಯನ್ನುಒದಗಿಸುತ್ತದೆ.

**ಹೂಡಿಕೆದಾರರ ವಿಶ್ವಾಸ ಮತ್ತು ಕೈಗಾರಿಕೆಗಳಿಗೆ ನೆರವು**

ಈ ಪ್ರಯೋಜನಗಳು ಕೇವಲ ಕುಟುಂಬಗಳುಮತ್ತುಸಣ್ಣವ್ಯಾಪಾರಗಳಿಗೆ ಸೀಮಿತವಾಗಿಲ್ಲ, ದೊಡ್ಡ ಕೈಗಾರಿಕೆಗಳು ಮತ್ತು ಹೂಡಿಕೆದಾರರಿಗೂ ಇವು ತಲುಪುತ್ತವೆ. ಸಂಕೀರ್ಣ ವರ್ಗೀಕರಣ ವ್ಯವಸ್ಥೆಗಳು ಮತ್ತು ಇನ್ ವಾಯ್ಸ್ ಹೊಂದಾಣಿಕೆಯ ಪ್ರಕ್ರಿಯೆಯನ್ನು ಸರಳಗೊಳಿಸಲಾಗಿದೆ. ಇದರಿಂದ ವಹಿವಾಟಿನ ಹೆಚ್ಚಳದ ವಾತಾವರಣವನ್ನು ಇನ್ನಷ್ಟು ಊಹಿಸಬಹುದಾದಂತಾಗಿದೆ. ಜಾಗತಿಕ ಹೂಡಿಕೆದಾರರು ಈ ಸುಧಾರಣೆಯನ್ನು ಭಾರತದ ಆರ್ಥಿಕ ಸ್ಥಿರತೆಯ ಬಲವಾದ ಸಂಕೇತವೆಂದು ಪರಿಗಣಿಸಿದ್ದಾರೆ. ಸ್ನೇಹಪರ ತೆರಿಗೆ ವ್ಯವಸ್ಥೆಯೊಂದಿಗೆ, ಭಾರತದ ಆರ್ಥಿಕ ಚೌಕಟ್ಟು ಈಗ ಹೊಸ ಹೂಡಿಕೆ ಮತ್ತು ಉದ್ಯೋಗಸೃಷ್ಟಿಗೆವೇಗನೀಡುವಜಾಗತಿಕ ಮಾದರಿಯಾಗಿ ಹೊರಹೊಮ್ಮುವ ಸಾಧ್ಯತೆ ಇದೆ.

**ಹಣದುಬ್ಬರಕ್ಕೆ ನೇರ ಪರಿಹಾರ**

ಯಾವುದೇ ಸರ್ಕಾರಕ್ಕೆ ಹಣದುಬ್ಬರವು ಒಂದು ನಿರ್ಣಾಯಕ ಸವಾಲಾಗಿ ಉಳಿದಿದೆ. ಅಗತ್ಯ ವಸ್ತುಗಳನ್ನು ಅಗ್ಗವಾಗಿಸುವ ಮೂಲಕ, ಜಿ ಎಸ್ ಟಿ 2.0 ನೇರವಾಗಿ ಕುಟುಂಬಗಳ ಮೇಲಿನ ಒತ್ತಡವನ್ನು ಕಡಿಮೆ ಮಾಡುತ್ತದೆ ಮತ್ತು ಪರೋಕ್ಷವಾಗಿ ಹಣದುಬ್ಬರ ದರವನ್ನು ಇಳಿಸುತ್ತದೆ. ಈ ಸುಧಾರಣೆ–ಯು ಹಣದುಬ್ಬರವನ್ನು ಶೇಕಡ 0.5 ರಿಂದ 1 ರಷ್ಟು ಕಡಿಮೆ ಮಾಡಬಹುದು ಎಂದು ಅಂತಾರಾಷ್ಟ್ರೀಯ ವಿಶ್ಲೇಷಕರು ಅಂದಾಜಿಸಿದ್ದಾರೆ. ಇದು ನಿರಂತರ ಬೆಳವಣಿಗೆಗೆಬಲವಾದಅಡಿಪಾಯವನ್ನು ಒದಗಿಸುತ್ತದೆ.

**ಜಿಡಿಪಿ ಮತ್ತು ಮಾರುಕಟ್ಟೆಗಳ ಮೇಲೆ ಸಕಾರಾತ್ಮಕ ಪರಿಣಾಮ**

ಮುಂಬರುವಆರ್ಥಿಕವರ್ಷದಲ್ಲಿಜಿಎಸ್ ಟಿ 2.0 ಭಾರತದ ಜಿಡಿಪಿ ಬೆಳವಣಿಗೆಗೆ 0.5 ರಿಂದ 1.2 ಪ್ರತಿಶತದಷ್ಟು ಅಂಶಗಳನ್ನು ಸೇರಿಸಬಹುದು ಎಂದು ಅರ್ಥಶಾಸ್ತ್ರಜ್ಞರು ಅಂದಾಜಿಸಿದ್ದಾರೆ.ಬಳಕೆಯಹೆಚ್ಚಳದಿಂದ ಪ್ರಯೋಜನಗೊಳ್ಳುವ ಈ ಬೆಳವಣಿಗೆಯು ವಿಶೇಷವಾಗಿ ಆಟೋಮೊಬೈಲ್, ಎಫ್ ಎಂ ಸಿ ಜಿ (ಈಒಅಉ) ಮತ್ತು ಎಲೆಕ್ಟ್ರಾನಿಕ್ಸ್ ಕ್ಷೇತ್ರಗಳಿಗೆ ಲಾಭ ತರಲಿದೆ. ಈ ಘೋಷಣೆಯಾದ ಕೂಡಲೇ ಷೇರು ಮಾರುಕಟ್ಟೆಗಳು ಸಕಾರಾತ್ಮಕವಾಗಿ ಪ್ರತಿಕ್ರಿಯಿಸಿವೆ.ಸೆನ್ಸೆಕ್ಸ್300ಅಂಕಗಳಿಗಿಂತ ಹೆಚ್ಚು ಏರಿಕೆ ಕಂಡರೆ, ನಿಫ್ಟಿ ಶೇಕಡ 0.5 ರಷ್ಟು ಗಳಿಕೆ ಕಂಡಿದೆ. ಆಟೋ ಮತ್ತು ಗ್ರಾಹಕ ವಸ್ತುಗಳ ಕಂಪನಿಗಳ ಷೇರುಗಳು 4 ರಿಂದ 6 ರಷ್ಟು ಹೆಚ್ಚಳ ಕಂಡಿವೆ. ಇದು ಹೂಡಿಕೆದಾರರ ದೃಢ ವಿಶ್ವಾಸವನ್ನು ಪ್ರತಿಬಿಂಬಿಸುತ್ತದೆ.

**ಆರ್ಥಿಕಪರಿಣಾಮಮತ್ತುಬೆಳವಣಿಗೆಯ ಸಮತೋಲನ**

ತೆರಿಗೆ ಕಡಿತದಿಂದ ಸರ್ಕಾರದ ಬೊಕ್ಕಸಕ್ಕೆ ಸುಮಾರು?48,000ಕೋಟಿನಷ್ಟವಾಗಲಿದೆ ಎಂದು ಸರ್ಕಾರ ಒಪ್ಪಿಕೊಂಡಿದೆ. ಆದರೆ, ನೀತಿ ನಿರೂಪಕರು ಮತ್ತು ತಜ್ಞರು ಈ ನಷ್ಟವನ್ನು ಎರಡು ವರ್ಷಗಳಲ್ಲಿ ಹೆಚ್ಚಿದ ಬಳಕೆ ಮತ್ತು ಆರ್ಥಿಕ ಚಟುವಟಿಕೆಗಳ ಮೂಲಕ ಭರಿಸಲಾಗುವುದು ಎಂದು ನಂಬಿದ್ದಾರೆ. 56 ನೇ ಜಿ ಎಸ್ ಟಿ ಕೌನ್ಸಿಲ್ ಸಭೆಯಲ್ಲಿ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಹೇಳಿದಂತೆ, "ಸಾರ್ವಜನಿಕ ಹಿತಾಸಕ್ತಿಗಾಗಿ ನಾವು ತಕ್ಷಣದನಷ್ಟವನ್ನುಸಹಿಸಿಕೊಳ್ಳಬೇಕಾದರೆ, ಈ ಹೂಡಿಕೆಯು ಭವಿಷ್ಯದಲ್ಲಿ ಆರ್ಥಿಕತೆಯನ್ನು ಬಲಪಡಿಸುತ್ತದೆ."

**ಸ್ವಾವಲಂಬಿ ಭಾರತಕ್ಕಾಗಿ ಒಂದು ನಿರ್ಣಾಯಕ ಸುಧಾರಣೆ**

ಜಿ ಎಸ್ ಟಿ 2.0 ನಾಲ್ಕು ತೆರಿಗೆ ಸ್ಲ್ಯಾಬ್ ಗಳನ್ನು ಎರಡು ಮುಖ್ಯ ವಿಭಾಗಗಳಾಗಿ ವಿಂಗಡಿಸುತ್ತದೆ: ಅಗತ್ಯ ವಸ್ತುಗಳಿಗೆ ಶೇ. 5 (ಅಥವಾ ಶೂನ್ಯ) ಮತ್ತು ಸಾಮಾನ್ಯ ವಸ್ತುಗಳಿಗೆ ಶೇ. 18. ಇದರ ಜೊತೆಗೆ, ಐಷಾರಾಮಿ ಮತ್ತು ಹಾನಿಕಾರಕ ಉತ್ಪನ್ನಗಳಿಗೆ ಶೇ. 40 ರ 'ಡಿಮೆರಿಟ್ ಸ್ಲ್ಯಾಬ್' ಇದೆ. ಈ ರಚನಾತ್ಮಕ ಸ್ಪಷ್ಟತೆಯು ಪಾರದರ್ಶಕತೆಯನ್ನು ಹೆಚ್ಚಿಸುತ್ತದೆ, ನಿಯಮ ಪಾಲನೆಯನ್ನು ಸರಳಗೊಳಿಸುತ್ತದೆ ಮತ್ತು ಆತ್ಮನಿರ್ಭರ ಭಾರತದ ದೃಷ್ಟಿಕೋನಕ್ಕೆ ಅನುಗುಣವಾಗಿದೆ.

**ಕೇವಲ ನೀತಿಯಲ್ಲ, ಇದು ಜನ–ಕೇಂದ್ರಿತ ಆಡಳಿತ**

ತಾಂತ್ರಿಕ ವಿವರಗಳನ್ನು ಮೀರಿ, ಜಿ ಎಸ್ ಟಿ 2.0 ಸ್ಪಷ್ಟ ರಾಜಕೀಯ ಸಂದೇಶವನ್ನು ರವಾನಿಸುತ್ತದೆ: ಈ ಸರ್ಕಾರವು ಜನರಿಗೆ ಉತ್ತರದಾಯಿಯಾಗಿದೆ. ಅನೇಕ ದೇಶಗಳು ತೆರಿಗೆಗಳನ್ನು ಹೆಚ್ಚಿಸುತ್ತಿರುವ ಸಮಯದಲ್ಲಿ, ಭಾರತವು ಅವುಗಳನ್ನು ಕಡಿಮೆ ಮಾಡಲು ನಿರ್ಧರಿಸಿದೆ. ಇದು, ಜನರ ಸಮೃದ್ಧಿಯಾಗಿದ್ದು ರಾಷ್ಟ್ರೀಯ ಅಭಿವೃದ್ಧಿಯ ನಿಜವಾದ ಚಾಲಕಶಕ್ತಿ ಎಂಬುದನ್ನು ಸಂಕೇತಿಸುತ್ತದೆ.

**ಭಾರತದ ಆರ್ಥಿಕ ಪಯಣದಲ್ಲಿ ಒಂದು ಐತಿಹಾಸಿಕ ಅಧ್ಯಾಯ**

ಜಿ ಎಸ್ ಟಿ 2.0 ಕೇವಲ ತೆರಿಗೆ ದರಗಳ ಪುನರ್ ರಚನೆಯಲ್ಲ; ಇದು ಭಾರತದ ಆರ್ಥಿಕ ಕಥೆಯಲ್ಲಿ ಒಂದು ಮಹತ್ವದ ಮೈಲಿಗಲ್ಲು. ಕುಟುಂಬಗಳ ವೆಚ್ಚವನ್ನು ಕಡಿಮೆ ಮಾಡುವ, ವ್ಯವಹಾರ ಕಾರ್ಯಾಚರಣೆಗಳನ್ನು ಸರಳಗೊಳಿಸುವ ಮತ್ತು ಹೂಡಿಕೆದಾರರ ವಿಶ್ವಾಸವನ್ನು ಹೆಚ್ಚಿಸುವ ಮೂಲಕ, ಇದು ದೀರ್ಘಕಾಲೀನ, ಎಲ್ಲರನ್ನೂ ಒಳಗೊಂಡ ಬೆಳವಣಿಗೆಗೆ ಅಡಿಪಾಯ ಹಾಕುತ್ತದೆ.ಟೀಕಾಕಾರರು ಇದನ್ನು ಕೇವಲ ಮೇಲ್ನೋಟದ ಸುಧಾರಣೆ ಎಂದು ತಳ್ಳಿಹಾಕಬಹುದು, ಆದರೆ ವಾಸ್ತವವು ಆಳವಾದ ಸತ್ಯವನ್ನು ತೋರಿಸುತ್ತದೆ: ಈ ಸುಧಾರಣೆಯು ದೈನಂದಿನ ಜೀವನವನ್ನು ಸರಳಗೊಳಿಸುತ್ತದೆ, ಆರ್ಥಿಕತೆಯನ್ನು ಬಲಪಡಿಸುತ್ತದೆ ಮತ್ತು ತೆರಿಗೆ ನೀತಿಯು ಸಾಮಾಜಿಕ ಪ್ರಗತಿಯ ಒಂದು ಸಾಧನವಾಗಬಲ್ಲದು ಎಂಬುದನ್ನು ಮನರುಚ್ಚರಿಸುತ್ತದೆ.

ಜಿ ಎಸ್ ಟಿ 2.0 ಕೇವಲ ಆರ್ಥಿಕ ಸುಧಾರಣೆಯಾಗಿ ಮಾತ್ರವಲ್ಲದೆ, ನಾಗರಿಕರಿಗೆ ಉತ್ತರದಾಯಿತ್ವದ ಸಂಕೇತವಾಗಿ ಮತ್ತು ಬಲಿಷ್ಠ, ಸಮಗ್ರ ಭಾರತವನ್ನು ನಿರ್ಮಿಸುವ ಬದ್ಧತೆಯ ಸಂಕೇತವಾಗಿ ನೆನಪಿನಲ್ಲಿ ಉಳಿಯಲಿದೆ.

***



**ಲೇಖಕರು:**
**ನವನೀತ್ ಸೆಹಗಲ್**
**ಅಧ್ಯಕ್ಷರು, ಪ್ರಸಾರ ಭಾರತಿ**

### ಪ್ರತಿಯೊಬ್ಬರೂ ಜೀವನದಲ್ಲಿ ಉನ್ನತವಾದ ಕನಸುಗಳನ್ನು ಹೊಂದಿ

# ಗುರುವಿನ ಸ್ಥಾನ ಶ್ರೇಷ್ಠವಾದುದು



**ರಬಕವಿ-ಬನಹಟ್ಟಿ:** ಗುರುವಿನ ಸ್ಥಾನ ಶ್ರೇಷ್ಠವಾದುದು. ನಮಗೆ ಕಲಿಸಿದ ಗುರುಗಳನ್ನು ಸ್ಮರಣೆ ಮಾಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ.

ಗುರುವಿನ ಅನುಗ್ರಹದಿಂದ ವಿದ್ಯಾರ್ಥಿಗಳು ಶ್ರೇಷ್ಠ ಸಾಧನೆ ಮಾಡಬಲ್ಲರು. ಅಂಥ ಶಕ್ತಿ ಗುರುವಿನಲ್ಲಿದೆ. ಪ್ರತಿಯೊಬ್ಬರೂ ಜೀವನದಲ್ಲಿ ಉನ್ನತವಾದ ಕನಸುಗಳನ್ನು ಹೊಂದಿರಬೇಕೆಂದು ಮುಧೋಳದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪ್ರಾಚಾರ್ಯ ಎಸ್. ಎಂ. ಹಾದಿಮನಿ ತಿಳಿಸಿದರು.

ಅವರು ಬನಹಟ್ಟಿಯ ತಮ್ಮಣ್ಣಪ್ಪ ಚಿಕ್ಕೋಡಿ ಕಾಲೇಜಿನಲ್ಲಿ ಶಿಕ್ಷಕರ ದಿನಾಚರಣೆ ಮತ್ತು ಬಿ.ಎ. ಪ್ರಥಮ ವರ್ಷದ ವಿದ್ಯಾರ್ಥಿಗಳ ಸ್ವಾಗತ ಸಮಾರಂಭದಲ್ಲಿ ಮಾತನಾಡಿದರು.

ಜನತಾ ಶಿಕ್ಷಣ ಸಂಘದ ಆಡಳಿತ ಮಂಡಳಿಯ ಸದಸ್ಯ ಪಂಡಿತ ಹನಗಂಡಿ ಮಾತನಾಡಿ, ಶಿಕ್ಷಣದಿಂದ ವ್ಯಕ್ತಿತ್ವವನ್ನು ನಿರ್ಮಾಣ ಮಾಡಿಕೊಳ್ಳಬಹುದಾಗಿದೆ. ಆದ್ದರಿಂದ ಪ್ರತಿಯೊಬ್ಬರೂ ಉನ್ನತ ಶಿಕ್ಷಣ ಪಡೆದುಕೊಳ್ಳಬೇಕು ಎಂದರು.

ಇತಿಹಾಸ ವಿಭಾಗದ ಡಾ. ಮಂಜುನಾಥ ಬೆನ್ನೂರ ಮಾತನಾಡಿ, ಡಾ. ಎಸ್. ರಾಧಾಕೃಷ್ಣನ್ ಅವರ ಜೀವನದ ಆದರ್ಶಗಳನ್ನು ನಾವು ಕೂಡಾ ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಅವರ ಜೀವನವೇ ನಮಗೆ ಮಾರ್ಗದರ್ಶನವಾಗಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಪ್ರಾಚಾರ್ಯ ಡಾ. ಜಿ. ಆರ್. ಜುನ್ನಾಯ್ಕರ್, ರಾಜ್ಯಶಾಸ್ತ್ರವಿಭಾಗದಡಾ.ಮನೋಹರ ಶಿರಹಟ್ಟಿ, ವಿ. ಐ. ಪಾಟೀಲ ಮಾತನಾಡಿದರು.

ಜಮಖಂಡಿಯ ಓಲೆಮಠದ ಆನಂದ ದೇವರು ಸಾನಿಧ್ಯ ವಹಿಸಿದ್ದರು. ಜನತಾ ಶಿಕ್ಷಣ ಸಂಘದ ಆಡಳಿತ ಮಂಡಳಿಯ ಸದಸ್ಯ ವಿ. ಆರ್. ಕುಳ್ಳಿ ಅಧ್ಯಕ್ಷತೆ ವಹಿಸಿದ್ದರು.

ಕಾರ್ಯಕ್ರಮದಲ್ಲಿ ಜೆಎಸ್‌ಎಸ್ ಸಂಘದ ಆಡಳಿತ ಮಂಡಳಿಯ ಸದಸ್ಯರಾದ ಶ್ರೀಶೈಲ ಯಾದವಾಡ, ಮಹಾದೇವಿ ಕೊಳಕಿ, ಜಿ. ಎಸ್. ಪಾಟೀಲ, ಸುರೇಶ ನಡೋಣಿ, ರೇಷ್ಮಾ ಗಜಾಕೋಶ, ಗೀತಾ ಸಜ್ಜನ, ವಿದ್ಯಾರ್ಥಿ ಪ್ರತಿನಿಧಿ ಸುಧಾ ಕಾಮಾನಿ, ತೋಹಿದ್ ಬಾಗಿ, ದಾನಮ್ಮ ಮುಗಳಖೋಡ ಸೇರಿದಂತೆ ಇನ್ನೂ ಅನೇಕರು ಉಪಸ್ಥಿತರಿದ್ದರು.

## ಛಾಯಾ ಚಿತ್ರಕಾರರ ಸಂಘದ ಅಧ್ಯಕ್ಷರಾಗಿ ಹಾಸೀಂ ಆಯ್ಕೆ



**ಜಮಖಂಡಿ:** ತಾಲೂಕಾ ಛಾಯಾ ಚಿತ್ರಕಾರರ ಸಂಘದ 2025-26 ನೇ ಸಾಲಿನ ನೂತನ ಅಧ್ಯಕ್ಷರಾಗಿ ಹಾಸೀಂ ಜಮಖಂಡಿ ಮತ್ತು ಕಾರ್ಯದರ್ಶಿಯಾಗಿ ರಮೇಶ ಹಲವಾಯಿ ಅವಿರೋಧವಾಗಿ ಆಯ್ಕೆಗೊಂಡಿದ್ದಾರೆ.

ಉಪಾಧ್ಯಕ್ಷರಾಗಿ ಸಿದ್ದು ಗಡದಿ, ಖಜಾಂಚಿಯಾಗಿ ಶ್ರೀಶೈಲ ಮಾಳಿ, ಸಾವಳಗಿ ವಲಯದ ಅಧ್ಯಕ್ಷರಾದ ಅಣ್ಣಪ್ಪ ಮೋಹಿತೆ,

ತೊದಲಬಾಗಿ ವಲಯದ ಅಧ್ಯಕ್ಷ ಪ್ರಲ್ಹಾದ ಲೋಗಾವಿ, ಹಿಪ್ಪರಗಿ ವಲಯದ ಅಧ್ಯಕ್ಷ ಕಾಶೀಂಸಾಬ ನದಾಫ, ಕೊಣ್ಣೂರ ವಲಯದ ಅಧ್ಯಕ್ಷ ಶಶಿಕಾಂತ ಮಂಡಾಗಣಿ ನೇಮಕಗೊಂಡಿದ್ದಾರೆ.

ಆಡಳಿತ ಮಂಡಳಿ ಸದಸ್ಯರಾಗಿ ಅಶೋಕ ಜೋಶಿ, ಅಣ್ಣಾಸಾಹೇಬ ಕಾಶೀದ, ರವೀಂದ್ರ ಕೋಳಿ, ಸಿದ್ದು ಮಾಳಿ, ಶೇಖರ ಹರಕಂಗಿ, ಸಂಜಯ ಕಬ್ಬೂರಿ, ಚಾಂದಸಾಬ ಬಾಗಣಿ, ರವೀಂದ್ರ ಜಂಬಗಿ, ಅಸ್ಕರಅಲಿ ಶೇಖ, ಜಗದೀಶ ತೆಗ್ಗಿನಮಠ, ಮಹಮ್ಮದ ಮುಲ್ಲಾ, ಶ್ರೀಧರ ಬೆಳನ್ನವರ ಆಯ್ಕೆಗೊಂಡಿದ್ದಾರೆ.

# ಮಹಾಲಿಂಗೇಶ್ವರ ಜಾತ್ರೆಯ ಸಮಾರೋಪ: ಸೇವಾರ್ಥಿಗಳಿಗೆ ಸನ್ಮಾನ

**ವರದಿ: ಚಂದ್ರಶೇಖರ ಮೋರೆ.**



**ಮಹಾಲಿಂಗಪುರ :** ಬುಧವಾರ ಸಂಜೆ ಮಹಾಲಿಂಗೇಶ್ವರಜಾತ್ರೆಯರಥದಕಳಸವನ್ನು ಇಳಿಸುವುದರೊಂದಿಗೆ ಪ್ರಸ್ತಕ ಸಾಲಿನ ಜಾತ್ರಾ ಮಹೋತ್ಸವದ ಎಲ್ಲಾ ಕಾರ್ಯಕ್ರಮಗಳು ಸಮಾರೋಪಗೊಂಡವು.

ಬುಧವಾರ ಮುಂಜಾನೆ ಶ್ರೀಮಠದಲ್ಲಿ ಜಾತ್ರಾ ಕಮೀಟಿಯಿಂದ ಹಮ್ಮಿಕೊಂಡಿದ್ದ ಸೇವಾರ್ಥಿಗಳ ಸನ್ಮಾನ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಜಾತ್ರಾ ಕಮೀಟಿ ಅಧ್ಯಕ್ಷ ರವಿಗೌಡ ಪಾಟೀಲ ಮಾತನಾಡಿ, ಮಹಾಲಿಂಗಪುರವು ಬೆಲ್ಲದ ನಾಡು. ಹಿಂದೂ-ಮುಸ್ಲಿಂ ಭಾವೈಕ್ಯತೆಯ ಬೀಡು ಎಂದೇ ಪ್ರಸಿದ್ಧಿಯಾಗಿದೆ. ಪಟ್ಟಣದ ಆರಾಧ್ಯದೇವ ಮಹಾಲಿಂಗೇಶ್ವರ ಜಾತ್ರೆಯು ಮಹಾಲಿಂಗಪುರದ ಪ್ರಮುಖ ಹಬ್ಬವಾಗಿದೆ. ಒಂದು ದಿನ ಜಟೋತ್ಸವ, ಎರಡು ದಿನಗಳ ಕಾಲ ರಥೋತ್ಸವ, ಕುಸ್ತಿ ಪಂದ್ಯಾವಳಿ, ಎರಡು ದಿನ ರಸಮಂಜರಿ, ಕಳಸ ಇಳಿಸುವುದು ಸೇರಿ ಜಾತ್ರೆಯ ಪ್ರಮುಖ ಆರು ದಿನಗಳ ಜಾತ್ರೆಯಲ್ಲಿ ಎಲ್ಲಾ ಸಮುದಾಯಗಳ ಸದ್ಭಕ್ತರು ಶ್ರದ್ಧಾ, ಭಕ್ತಿಯಿಂದ ಸೇವೆ ಸಲ್ಲಿಸಿದರು. ಲಕ್ಷಾಂತರ ಭಕ್ತರು ಜಾತ್ರೆಯಲ್ಲಿ ಭಾಗವಹಿಸಿದ್ದರೂ ಕೂಡ, ಯಾವುದೇ ಅಹಿತಕರ ಘಟನೆಗಳಿಗೆ ಅವಕಾಶ ನೀಡದೇ, ಶಾಂತಿಯುತವಾಗಿ ಜಾತ್ರೆಯು ಜರುಗಲು ಬೆಳೆಯುವ ಜಟೆಗಳ ಒಡೆಯ ಮಹಾಲಿಂಗೇಶ್ವರರ ಕೃಪೆಯೇ ಕಾರಣವಾಗಿದೆ ಎಂದರು.

ಇದೇ ಸಂದರ್ಭದಲ್ಲಿ ಐತಿಹಾಸಿಕ ಚನ್ನಗಿರಿ ಕೋಟೆ ಮತ್ತು ದೇವಸ್ಥಾನದ ಜೀರ್ಣೋದ್ಧಾರ ಕೆಲಸಕ್ಕೆ ಕಾಣಿಕೆ ಸಲ್ಲಿಸಿದ ದಾನಿಗಳನ್ನು ಸಹ ಸತ್ಕರಿಸಲಾಯಿತು. ಚನ್ನಗಿರಿ ಕೋಟೆಯ ಜೀರ್ಣೋದ್ಧಾರ ಕೆಲಸವನ್ನು ಮೆಚ್ಚಿ ಗಡಾದ ಓಣಿಯ ಹಿರಿಯರ ಪರವಾಗಿ ಚನ್ನಪ್ಪದಲಾಲ ಅವರು ಜಾತ್ರಾ ಕಮಿಟಿ ಅಧ್ಯಕ್ಷ ರವಿಗೌಡ ಪಾಟೀಲ ಅವರನ್ನು ಸನ್ಮಾನಿಸಿ ಗೌರವಿಸಿದರು.

ಜಾತ್ರಾ ಯಶಸ್ವಿಗೆ ಸಹಕರಿಸಿದ ಪುರಸಭೆ ಸಿಬ್ಬಂದಿ, ಪೌರ ಕಾರ್ಮಿಕರು, ಪೊಲೀಸ್ ಇಲಾಖೆ, ಕೆಇಬಿ ಅಧಿಕಾರಿಗಳು, ಶ್ರೀಮಠದ ಅರ್ಚಕರು,

ರಥೋತ್ಸವದ ಸೇವಕರು, ಮಾಧ್ಯಮ ಪ್ರತಿನಿಧಿಗಳು, ಪ್ರಸಾದ ದಾನಿಗಳು, ಕರಡಿ ಮಜಲು ಕಲಾವಿದರು, ಪಡಿತರ ಅಂಗಡಿಗಳ ಮಾಲೀಕರು, ಭೋವಿ, ವಡ್ಡರ ಸಮಾಜ ಮತ್ತು ಬಡಿಗೇರ ಸಮಾಜದ ಸೇವಕರಾದಿಯಾಗಿ ಇನ್ನೂರಕ್ಕೂ ಅಧಿಕ ಸೇವಾರ್ಥಿಗಳನ್ನು ಜಾತ್ರಾ ಕಮೀಟಿಯ ಹಿರಿಯರು ಸನ್ಮಾನಿಸಿದರು.

ನಂತರ ಭಕ್ತಾಧಿಗಳಿಗೆ ಹರಿವಾನಕಟ್ಟೆ ಪ್ರಸಾದವನ್ನು ವಿತರಿಸಲಾಯಿತು. ಜಾತ್ರೆಯ ಸಮಾರೋಪ ನಿಮಿತ್ಯ ಮುಂಜಾನೆ 10 ರಿಂದ ಮಧ್ಯಾಹ್ನ 3 ರವರೆಗೆ ಮಹಾಲಿಂಗೇಶ್ವರ ದೇವಸ್ಥಾನಕ್ಕೆ ಆಗಮಿಸಿದ್ದ ಸಾವಿರಾರು ಭಕ್ತರಿಗೆ ತುಳಜಪ್ಪ ಬಾಳಿಕಾಯಿ, ಮಲ್ಲಪ್ಪ ಬುರುಡ, ಭೀಮನಗೌಡ ಪಾಟೀಲ, ಅರ್ಜುನ ಖೋತ, ಅಶೋಕ ಮಂಟೂರ, ಪಾಂಡು ಖೋತ ಅವರು ಆರನೇ ದಿನದ ಮಹಾಪ್ರಸಾದಕ್ಕಾಗಿ ಮಾದೇಲಿ, ಹಾಲು, ಅನ್ನ, ಸಾಂಬಾರ ಮಹಾಪ್ರಸಾದ ವ್ಯವಸ್ಥೆ ಕಲ್ಪಿಸಿದ್ದರು.

ಪುರಸಭೆ ಅಧ್ಯಕ್ಷ ಯಲ್ಲನಗೌಡ ಪಾಟೀಲ, ಜಾತ್ರಾ ಕಮೀಟಿ ಹಿರಿಯರಾದ ಲಕ್ಷ್ಮಣಗೌಡ ಪಾಟೀಲ, ಮಹಾಂತೇಶ ಹಿಟ್ಟಿನಮಠ, ಕೃಷ್ಣಗೌಡ ಪಾಟೀಲ, ವಿಜಯ ಕುಳ್ಳೊಳ್ಳಿ, ಲಕ್ಕಪ್ಪ ಚಮಕೇರಿ, ಬಸವರಾಜ ಪಾಶ್ಚಾಪೂರ, ಮಹಾಲಿಂಗಪ್ಪ ತಟ್ಟಿಮನಿ, ಮಹಾಂತೇಶ ಘಟ್ನಟ್ಟಿ, ಮಹಾಲಿಂಗಪ್ಪ ಜಕ್ಕನ್ನವರ, ವಿಜುಗೌಡ ಪಾಟೀಲ, ಶ್ರೀಶೈಲ ಭಜಂತ್ರಿ, ಸಿದ್ದುಗೌಡ ಪಾಟೀಲ, ಚನ್ನಪ್ಪ ಕೋಳಿಗುಡ್ಡ, ಶಂಕರಗೌಡ ಪಾಟೀಲ, ಚನ್ನಪ್ಪ ಪಟ್ಟಣಶೆಟ್ಟಿ, ಮಲ್ಲಿಕಾರ್ಜುನ ಕುಳ್ಳೊಳ್ಳಿ, ಕಲ್ಲಪ್ಪ ಚಿಂಚಲಿ, ಶ್ರೀಶೈಲಗೌಡ ಪಾಟೀಲ, ಠಾಣಾಧಿಕಾರಿಗಳಾದ ಕಿರಣ ಸತ್ತಿಗೇರಿ, ಮಧು ಎಲ್., ಪುರಸಭೆ ಮುಖ್ಯಾಧಿಕಾರಿ ನಾಮದೇವ ಲಮಾಣಿ, ಕಂದಾಯ ಅಧಿಕಾರಿ ಪಿ. ವೈ. ಸೊನ್ನದ, ಕಾನಿಪ ಅಧ್ಯಕ್ಷ ಮಹೇಶ ಮನ್ನಯ್ಯನವರಮಠ, ಹೆಸ್ಕಾಮ್ ನ ಅಧಿಕಾರಿಗಳಾದ ರಾಜೇಶ ಬಾಗೋಜಿ, ಶ್ರೀಮಠದ ಸೇವಕರಾದ ಸುಭಾಸ ವಜ್ಜರಮಟ್ಟಿ, ಈಶ್ವರ ಮಠದ, ಮಹಾಲಿಂಗ ಕರಡಿ, ಶ್ರೀಶೈಲ ಸ್ವಾಮಿ, ಸಿದ್ದಯ್ಯಾ ಸ್ವಾಮಿ, ಅನೀಲಕಾಲತಿಪ್ಪಿ, ಬಸವರಾಜ ಮಡಿವಾಳರ, ಮಲ್ಲು ಖೋತ ಸೇರಿದಂತೆ ಶ್ರೀಮಠದ ಹಿರಿಯರು, ಸೇವಕರು ಪಾಲ್ಗೊಂಡಿದ್ದರು. ಪತ್ರಕರ್ತ ಚಂದ್ರಶೇಖರ ಮೋರೆ ಸೊಗಸಾಗಿ ನಿರೂಪಿಸಿ ವಂದಿಸಿದರು.

## ಜಿಲ್ಲಾ ಮಟ್ಟದ ವಾಲಿಬಾಲ್ ಪಂದ್ಯಾವಳಿಗೆ ಆಯ್ಕೆ

**ಮೂಡಲಗಿ :** ಶಾಲಾ ಶಿಕ್ಷಣ ಇಲಾಖೆಯ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯದ ಸಹಯೋಗದಲ್ಲಿ ಎನ್.ಎಸ್.ಎಫ್. ಪ್ರೌಢ ಶಾಲೆ ಕುಲಗೋಡದಲ್ಲಿ ಜರುಗಿದ

ತಾಲೂಕು ಮಟ್ಟದ ಕ್ರೀಡಾ ಕೂಟದ ವಾಲಿಬಾಲ್ ಪಂದ್ಯದಲ್ಲಿ ತಾಲೂಕಿನ ಕಲ್ಲೋಳ್ಳಿ ಪಟ್ಟಣದ ರಾಮಲಿಂಗೇಶ್ವರ ಶಿಕ್ಷಣ ಸಂಸ್ಥೆಯ ಶಿ. ಬ. ಪಾಟೀಲ ಪ್ರಾಥಮಿಕ ಶಾಲೆಯ ಬಾಲಕ ಹಾಗೂ ಬಾಲಕಿಯರ ಎರಡು ತಂಡದ ಆಟಗಾರರು ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ಜಿಲ್ಲಾ ಮಟ್ಟಕ್ಕೆ ಆಯ್ಕೆಯಾದ ವಿದ್ಯಾರ್ಥಿಗಳು

**ಬಾಲಕರ ತಂಡಕ್ಕೆ:** ಪ್ರೇಮಸಾಯಿ ಬಡಿಗೇರ, ನಹೀಮ ನದಾಫ್, ತೇಜಸ್ ಬಡಿಗೇರ, ಹರೀಶ ಹೆಬ್ಬಾಳ, ಸನತ್ ಕಂಬಾರ, ಬಾಲಕಿಯರ ತಂಡಕ್ಕೆ: ಅಂಜನಾ ಚೌಗಲಾ, ಶ್ರೇಯಾ ಕಬಾಡಗಿ, ಸಂಜನಾ ಬಬಲಿ, ತೇಜಸ್ವಿನಿ ಕೋಟಗಿ, ಕಾವೇರಿ ಹುಲ್ಲೋಳಿ



ಈ ಕ್ರೀಡಾಪಟುಗಳಿಗೆ ರಾಮಲಿಂಗೇಶ್ವರ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಬಸನಗೌಡ ಶಿ. ಪಾಟೀಲ ಹಾಗೂ ಆಡಳಿತ ಮಂಡಳಿ ಸದಸ್ಯರು, ಮುಖ್ಯೋಪಾಧ್ಯಾಯ ರಾಜು ವಾಯ್. ಉಪ್ಪಾರ, ದೈಹಿಕ ಶಿಕ್ಷಣ ಶಿಕ್ಷಕ ಬಿ. ಎಂ. ಡಬ್ಬನವರ ಹಾಗೂ ಸಿಬ್ಬಂದಿ ವರ್ಗದವರು ಅಭಿನಂದನೆ ಸಲ್ಲಿಸಿದ್ದಾರೆ.

## ನಾಳೆ ಸ್ವಯಂ ಪ್ರೇರಿತ ರಕ್ತದಾನ ಶಿಬಿರ

**ರಬಕವಿ :** ಇಲ್ಲಿಯ ಪ್ರತಿಷ್ಠಿತ ವಿದ್ಯಾ ಸಂಸ್ಥೆಯಾದ ಹಜಾರೆ ಫೌಂಡೇಶನ್ನಿನ ಪದ್ಮಾವತಿ ಸಮೂಹ ಶಿಕ್ಷಣ ಸಂಸ್ಥೆ ಹಾಗೂ ಹಜಾರೆ ಬಜಾರ್ ವತಿಯಿಂದ ಸಂಸ್ಥಾಪಕ ಅಧ್ಯಕ್ಷರಾದ ಸತೀಶ ಹಜಾರೆ ಹಿತೈಷಿಗಳು,

ಅಭಿಮಾನಿ ಬಳಗದ ವತಿಯಿಂದ ಭಾನುವಾರ ಸಪ್ಟೆಂಬರ್ 14 ರಂದು ಸ್ವಯಂ ಪ್ರೇರಿತ ರಕ್ತದಾನ ಶಿಬಿರವನ್ನು ಏರ್ಪಡಿಸಲಾಗಿದೆ ಎಂದು ಸಂಸ್ಥೆಯ ಆಡಳಿತಾಧಿಕಾರಿಗಳಾದ ಭಾರತಿ ತಾಳಿಕೋಟಿ, ಪದ್ಮಾವತಿ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯ ಶ್ರೀಶೈಲ ಕುಂಬಾರ, ಪದ್ಮಾವತಿ ಪದವಿ ಕಾಲೇಜಿನಪ್ರಾಚಾರ್ಯಸತೀಶಬೆಳಗಲಿ ಹಾಗೂ ಪದ್ಮಾವತಿ ವಿದ್ಯಾಲಯದ ಮುಖ್ಯ ಗುರುಗಳಾದ ಮಂಜು ಹುಕ್ಕೇರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮಹಾಲಿಂಗೇಶ್ವರ ರಥೋತ್ಸವಕ್ಕೆ ವಿಶ್ವಕರ್ಮ ಸಮಾಜದವರ ವಿಶಿಷ್ಠ ಸೇವೆ

**ವರದಿ: ಚಂದ್ರಶೇಖರ ಮೋರೆ.**

**ಮಹಾಲಿಂಗಪುರ :** ಪುರದ ಆರಾಧ್ಯದೈವ ಮಹಾಲಿಂಗೇಶ್ವರರ ಮಹಾಜಾತ್ರೆಯ ಎರಡು ದಿನಗಳ ರಥೋತ್ಸವದಲ್ಲಿ ಪಟ್ಟಣದ ವಿಶ್ವಕರ್ಮ ಸಮಾಜದವರು ಸಲ್ಲಿಸುವ ಸೇವೆಯು ಬಹು ವಿಶಿಷ್ಟವಾಗಿದೆ.

ಅನಾದಿಕಾಲದಿಂದ ಬಂದ ಪದ್ಧತಿ:

ಮಹಾಲಿಂಗೇಶ್ವರ ಜಾತ್ರಾ ಮಹೋತ್ಸವ ಯಾವಾಗ ಪ್ರಾರಂಭವಾಗಿದೆಯೊ ಅಂದಿನಿಂದಲೂ ಮಹಾಲಿಂಗೇಶ್ವರ ಜಾತ್ರಾ ಮಹೋತ್ಸವದಲ್ಲಿ ಪಟ್ಟಣದ ವಿಶ್ವಕರ್ಮ ಬಡಿಗೇರ ಸಮಾಜದ ಹಿರಿಯರು, ಯುವಕರೇ ರಥದ ಸೇವೆ ಸಲ್ಲಿಸುತ್ತಾ ಬಂದಿರುವರು. ಇದು ಶ್ರೀಮಠದ ಪುರಾತನ ಪದ್ಧತಿಯಾಗಿದೆ.

ಮಹಾಲಿಂಗೇಶ್ವರ ಜಾತ್ರೆಯಲ್ಲಿ ತೇರಿನ ಮನೆಯಿಂದ ರಥವನ್ನು ಹೊರಗೆ ತೆಗೆದು ರಥೋತ್ಸವದ ಮೊದಲ ದಿನ ರಥದ ಸ್ವಚ್ಛತೆ, ವಿದ್ಯುತ್ ದೀಪಗಳು ಮತ್ತು ಹೂವಿನಿಂದ ರಥವನ್ನು ಅಲಂಕರಿಸುವದು; ರಥದ ಮೇಲೆ ಕಳಸವನ್ನು ಪ್ರತಿಷ್ಠಾಪಿಸುವದು; ಜಾತ್ರೆ ಮುಗಿದ ನಂತರ ಕಳಸ ಇಳಿಸುವದು; ಎರಡು ದಿನಗಳ ಕಾಲ ರಥದಲ್ಲಿ ಕುಳಿತು ತೆಂಗಿನಕಾಯಿ ಒಡೆಯುವದು. ರಥೋತ್ಸವದ ವೇಳೆ ನಡುಚೌಕಿಯಲ್ಲಿ ಜಾಕ್ ಮೂಲಕ ರಥವನ್ನು ತಿರುಗಿಸುವದು. ಕಳಸ ಇಳಿಸಿದ ನಂತರ ರಥವನ್ನು ಸಂಪೂರ್ಣ ಸ್ವಚ್ಛಗೊಳಿಸಿ ಪುನ: ತೇರಿನ



ಮನೆಗೆ ಸಾಗಿಸುವದು ಸೇರಿದಂತೆ ರಥಕ್ಕೆ ಸಂಬಂಧಿಸಿದ ಪ್ರತಿಯೊಂದು ಸೇವಾ ಕಾರ್ಯಗಳನ್ನು ವಿಶ್ವಕರ್ಮ ಸಮಾಜದ ಸೇವಕರೇ ಮಾಡುತ್ತಾ ಬರುತ್ತಿದ್ದಾರೆ.

ಸೇವೆ ಸಲ್ಲಿಸಿದ ಬಡಿಗೇರ ಬಂಧುಗಳು : ಪಂಡಿತ ಬಡಿಗೇರ, ಪ್ರಕಾಶ ಬಡಿಗೇರ, ಮಹಾದೇವ ಬಡಿಗೇರ, ಬಾಲಚಂದ್ರ ಬಡಿಗೇರ, ಸುರೇಶ ಬಡಿಗೇರ, ಮುರಳಿ ಬಡಿಗೇರ, ಆನಂದ ಬಡಿಗೇರ, ಕಲ್ಲಪ್ಪ ಬಡಿಗೇರ (ಮಳಲಿ), ಪ್ರಕಾಶ ಬಡಿಗೇರ, ಈರಪ್ಪ ಬಡಿಗೇರ, ಮಹಾಲಿಂಗ ಬಡಿಗೇರ, ಪ್ರಲ್ಹಾದ ಬಡಿಗೇರ, ಅರುಣ ಬಡಿಗೇರ, ಮಹೇಶ ಬಡಿಗೇರ, ವೀರೇಶ ಬಡಿಗೇರ, ರಾಘು ಬಡಿಗೇರ, ಉಮೇಶ ಬಡಿಗೇರ, ಮಹಾಂತೇಶ ಬಡಿಗೇರ, ಸೋಮನಾಥ ಬಡಿಗೇರ, ಶ್ರೀಕಾಂತ ಬಡಿಗೇರ, ಸಂತೋಷ ಬಡಿಗೇರ, ವಿನಾಯಕ ಬಡಿಗೇರ, ಈರಪ್ಪ ಎಸ್. ಬಡಿಗೇರ, ಮಹಾಲಿಂಗ ಸತ್ತಿ, ಚಂದು ಬಡಿಗೇರ,

ರವಿ ಬಡಿಗೇರ, ಸಿದ್ದು ಬಡಿಗೇರ, ಕಾರ್ತಿಕ ಬಡಿಗೇರ, ವಿನಾಯಕ ಆರ್. ಬಡಿಗೇರ ಸೇರಿದಂತೆ ವಿಶ್ವಕರ್ಮ ಬಡಿಗೇರ ಸಮಾಜದ ಮೂವತ್ತಕ್ಕೂ ಅಧಿಕ ಸೇವಕರು ಪ್ರತಿವರ್ಷ ಜಾತ್ರಾ ಮಹೋತ್ಸವದ ಎರಡು ದಿನ ರಾತ್ರಿಯಿಡೀ ರಥೋತ್ಸವ ಸರ್ವ ಸೇವೆಗಳಲ್ಲಿ ಶ್ರದ್ಧಾ ಭಕ್ತಿಯಿಂದ ಭಾಗವಹಿಸಿ ಸೇವೆ ಸಲ್ಲಿಸುತ್ತಾರೆ.

**ಐದನೇ ದಿನಕ್ಕೆ ಕಳಸ ಇಳಿಸುವದು :**

ಪ್ರತಿ ವರ್ಷ ಜಾತ್ರೆಯ ತುಂಬಿದ ತೇರಿನ ದಿನ ರಥದ ಮೇಲೆ ಕಳಸವನ್ನು ಪ್ರತಿಷ್ಠಾಪಿಸಿ, ಎರಡು ದಿನ ರಥೋತ್ಸವ ನಡೆಸುವದು. ಕಳಸ ಪ್ರತಿಷ್ಠಾಪಿಸಿದ ಐದನೇ ದಿನ ಸಾಯಂಕಾಲ ರಥದಿಂದ ಕಳಸ ಇಳಿಸಿ, ಜಾತ್ರಾ ಮಹೋತ್ಸವವನ್ನು ಸಂಪನ್ನಗೊಳಿಸುವದು ಶ್ರೀಮಠದ ಪರಂಪರೆಯಾಗಿದೆ.

### ವಿಶ್ವಕರ್ಮ ಸಮಾಜಕ್ಕೆ ದೊರೆತ ಸೇವಾಭಾಗ್ಯ:

**4-5 ಶತಮಾನಗಳ ಇತಿಹಾಸವಿರುವ ಮಹಾಲಿಂಗೇಶ್ವರ ಮಠದಲ್ಲಿ ಪ್ರತಿವರ್ಷ ನಡೆಯುವ ಜಾತ್ರೆಯಲ್ಲಿ ರಥಕ್ಕೆ ಸಂಬಂಧಿಸಿದ ಸೇವೆ ಸಿಕ್ಕಿರುವದು ನಮ್ಮ ಪೂರ್ವಜರು ಮಾಡಿದ ಪುಣ್ಯ ಹಾಗೂ ನಮಗೆ ದೊರೆತ ಸೇವಾ ಭಾಗ್ಯವಾಗಿದೆ. ಈಗಿರುವ ರಥವನ್ನು 1954 ರಿಂದ ತಯಾರಿಸಲಾಗಿದೆ. ಅದಕ್ಕಿಂತಲೂ ಪೂರ್ವದಲ್ಲಿ ಹಂದರದ ತೇರು ಇತ್ತು. ಆಗಲೂ ಸಹ ನಮ್ಮ ಪೂರ್ವಿಕರು ರಥೋತ್ಸವ ಸೇವೆಯಲ್ಲಿ ಭಾಗವಹಿಸುತ್ತಿದ್ದರು. ಪುರಾತನ ಕಾಲದಿಂದಲೂ ನಮ್ಮ ಸಮಾಜದ ಗುರುಹಿರಿಯರು, ಯುವಕರು ಪ್ರತಿವರ್ಷ ನಡೆಯುವ ಜಾತ್ರಾ ಮಹೋತ್ಸವದಲ್ಲಿ ಭಯ, ಭಕ್ತಿ, ಶ್ರದ್ಧೆಯಿಂದ ಮಹಾಲಿಂಗೇಶ್ವರರಿಗೆ ತನು,ಮನ,ಧನ ಸೇರಿದಂತೆ ತ್ರಿವಿಧ ಸೇವೆ ಸಲ್ಲಿಸುತ್ತಿದ್ದೇವೆ.**

**। ಬಾಲಚಂದ್ರ ಬಿ. ಬಡಿಗೇರ,**
**ವಿಶ್ವಕರ್ಮ ಸಮಾಜದ ಹಿರಿಯ ಸೇವಕರು.**

# ಶಾಸಕರ ಗ್ರಹ ಕಛೇರಿಯಲ್ಲಿ ವಿಶ್ವಕರ್ಮ ಜಯಂತ್ಯೋತ್ಸವ ಆಚರಣೆ



**ಇಳಕಲ್ :** ನಗರದಲ್ಲಿ ಶಾಸಕರ ಗ್ರಹ ಕಛೇರಿ ಎಸ್ ಆರ್ ಕೆ ನಿಲಯದಲ್ಲಿ ಶ್ರೀವಿಶ್ವಕರ್ಮ ರವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಜಯಂತಿಯನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ನಗರಸಭೆ ಅಧ್ಯಕ್ಷರಾದ ಶ್ರೀಮತಿ ಸುಧಾರಾಣಿ ಸಂಗಮ ಅಂಬೇಡ್ಕರ ಸೇವಾ ಸಮಿತಿ ಅಧ್ಯಕ್ಷರಾದ ಶರಣಪ್ಪ ಆಮದಿಹಾಳ, ನಗರಸಭೆ ಸದಸ್ಯರಾದ ಅಮೃತ ಅರುಣ ಬಿಜ್ಜಳ, ಹನುಮಂತ ತುಂಬದ. ಶ್ರೀಮತಿ ಶಾರದಾ ಪತ್ತಾರ, ಶ್ರೀಮತಿ ಮಹಾಂತಮ್ಮ ಹಾದಿಮನಿ. ಮಹಾಂತೇಶ ಹನುಮಹಾಳ. ಶಬ್ಬೀರ ಬಾಗವಾನ ,ಮಲ್ಲು ಮಡಿವಾಳರ.

ವಿಶ್ವಕರ್ಮ ಬಡಿಗೇರ, ಕೃಷ್ಣ ಕಾಂಬ್ಳೆ, ಶ್ರೀಮತಿ ಕಲ್ಪನಾ ಗಜೇಂದ್ರಗಡ ಮತ್ತು ಕೆಪಿಸಿಸಿ ಸದಸ್ಯ ಮಂಜುನಾಥ ಸಪ್ಪರದ ಉಪಾಧ್ಯಕ್ಷರಾದ ಅಹ್ಮದಸಾಬ ಬಾಗವಾನ ಕಂಡಕ್ಟರ್ ಮತ್ತು, ಕಾಳಪ್ಪ ಬಡಿಗೇರ, ಸಿರಸಪ್ಪ ಪತ್ತಾರ, ಮಹಾಂತೇಶ ಬಡಿಗೇರ ಹಾಗೂ ವಿಶ್ವಕರ್ಮ ಸಮಾಜದ ಅಧ್ಯಕ್ಷರು ಉಪಾಧ್ಯಕ್ಷರು ಹಿರಿಯರು ಸಮಾಜದ ಮುಖಂಡರುಗಳು ಹಾಗೂ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು ಪಾಲ್ಗೊಂಡಿದ್ದರು.

**ವರದಿ ಕೆ ಎಚ್ ಸೋಲಾಪೂರ**

# ಕೊಟ್ರಶೆಟ್ಟಿ ಪೌಂಡೇಶನ ವತಿಯಿಂದ ದಾಸೋಹ ಸೇವೆಗೆ ಸಾವಿರ ರೊಟ್ಟಿ ಅರ್ಪಣೆ




**ಬನಹಟ್ಟಿ :** ಇಲ್ಲಿಯ ಕಾಡಸಿದ್ದೇಶ್ವರ ಜಾತ್ರೆಗೆ ಆಗಮಿಸುವ ಭಕ್ತರಿಗೆ ಮೂರು ದಿನಗಳ ಕಾಲ ಜರುಗುವ ಪ್ರಸಾದ ಸೇವೆಗೆ ರಬಕವಿಯ ಡಿ. ಕೆ. ಕೊಟ್ರಶೆಟ್ಟಿ ಫೌಂಡೇಶನ್ ವತಿಯಿಂದ ಒಂದು ಸಾವಿರ ರೊಟ್ಟಿಯನ್ನು ಫೌಂಡೇಶನ್ ಅಧ್ಯಕ್ಷರಾದ ಸೋಮಶೇಖರ ದುಂಡಪ್ಪ ಕೊಟ್ರಶೆಟ್ಟಿ ಅವರು ಸಪ್ಟೆಂಬರ್ 12 ರಂದು ಮುಂಜಾನೆ ಸಮರ್ಪಿಸಿದರು.

ಸೋಮಶೇಖರ ಕೊಟ್ರಶೆಟ್ಟಿ ಅವರು ಸಾಮಾಜಿಕ ಕಾರ್ಯಗಳಲ್ಲಿ ಯಾವತ್ತೂ ಮುಂಚೂಣಿಯಲ್ಲಿ ಇದ್ದಾರೆ ಎಂದು ಪ್ರಸಾದ ಸೇವಾ ಸಮಿತಿಯ ಬ್ರಿಜ್ ಮೋಹನ್ ಚಿಂಡಕ ಅವರು ಈ ಸಂದರ್ಭದಲ್ಲಿ ತಿಳಿಸಿದರು.

ಕಾಡಸಿದ್ಧೇಶ್ವರ ಪ್ರಸಾದ ಸೇವಾ ಸಮಿತಿಯ ಗಿರೀಶ ಕಾಡದೇವರ, ಶ್ರೀಶೈಲ ಅಥಣಿ, ಗುಂಡಯ್ಯ ಕಾಡದೇವರ, ಶಾಂತು ಅಥಣಿ, ಅಂದಾನಿ ಕಾಡದೇವರ, ಶಿವಾನಂದ ಮುತ್ತೂರ, ರವಿ ಮುತ್ತೂರ, ಡಾಕ್ಟರ ಜಿ. ಎಚ್. ಚಿತ್ತರಗಿ, ಚಂದ್ರಶೇಖರ ಹುಲಗಬಾಳಿ, ಉಮೇಶ ಹನಗಂಡಿ, ಮಲ್ಲಿಕಾರ್ಜುನ ಗಡೇನ್ನವರ, ವಿಜಯಕುಮಾರ ಹಲಕುರ್ಕಿ, ಭಾರತ ಗ್ಯಾಸ್ ಸಿಬ್ಬಂದಿ ಸಂಗಮೇಶ ಗುಣಕಿ, ಮಹಾಂತೇಶ ಬೆಟಗೇರಿ, ಶ್ರೀಧರ ಮೋರೆ, ಅರುಣ ಭಾವಂಜಿ ಮೊದಲಾದವರು ಉಪಸ್ಥಿತರಿದ್ದರು.

# ತೇರದಾಳ ಪುರಸಭೆ ಸಾಮಾನ್ಯ ಸಭೆ: ಕಳಪೆ ಕಾಮಗಾರಿ ಸರಿಪಡಿಸಿ ಇಲ್ಲವೇ ಗುತ್ತಿಗೆದಾರರ ಮೇಲೆ ಕ್ರಮ ಕೈಗೊಳ್ಳಿ

**ತೇರದಾಳ :** ವಾರ್ಡ್ ನಂಬರ್ 19 ರಲ್ಲಿ ಗುತ್ತಿಗೆದಾರಮುರುಗೇಶಮಿರ್ಜಿಮಾಡಿರುವ ಕಾಮಗಾರಿ ಕಳಪೆ ಗುಣಮಟ್ಟದಿಂದ ಕೂಡಿದೆ. ಅದನ್ನು ಸರಿಪಡಿಸಿ ಎಂದು ಲಿಖಿತವಾಗಿ ಅರ್ಜಿ ಸಲ್ಲಿಸಿದ್ದರೂ ಇದುವರೆಗೆ ಯಾವುದೇ ಕ್ರಮ ಕೈಗೊಂಡಿಲ್ಲ. ವಾರ್ಡಿನ ಜನ ಛೀಮಾರಿ ಹಾಕುತ್ತಿದ್ದಾರೆ. ಕಳಪೆ ಕಾಮಗಾರಿ ಸರಿಪಡಿಸಿ ಇಲ್ಲವೇ ಗುತ್ತಿಗೆದಾರನ ಮೇಲೆ ಕ್ರಮ ಕೈಗೊಳ್ಳಿ ಎಂದು ಪುರಸಭೆ ಸದಸ್ಯ ಸಂತೋಷ ಜಮಖಂಡಿ ಶುಕ್ರವಾರ ಪುರಸಭೆ ಸಭಾ ಭವನದಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು.

ಅಭಿಯಂತರೆ ಶ್ರೀಮತಿ ಭಾಗ್ಯಶ್ರೀ ಪಾಟೀಲ ಮಾತನಾಡಿ, ಕಾಮಗಾರಿಯನ್ನು ಮುಖ್ಯಾಧಿಕಾರಿ ಜತೆ ಭೇಟಿ ನೀಡಿ ಪರಿಶೀಲಿಸಿ ಆಗಿರುವ ತಪ್ಪನ್ನು ಸರಿಪಡಿಸುವಂತೆ ಮೌಖಿಕವಾಗಿ ಹಾಗೂ ನೋಟಿಸ್ ನೀಡುವ ಮೂಲಕ ಗುತ್ತಿಗೆದಾರರಿಗೆ ತಿಳಿಸಲಾಗಿದೆ. ಸರಿಪಡಿಸದಿದ್ದರೆ ಕಾನೂನಿನ ಪ್ರಕಾರ ಇನ್ನೆರಡು ನೋಟಿಸ್ ನೀಡಿ ಶಿಸ್ತು ಕ್ರಮಕ್ಕೆ ಜಿಲ್ಲಾಧಿಕಾರಿಗಳಿಗೆ ವರದಿ ಸಲ್ಲಿಸುವುದಾಗಿ ಸಭೆಗೆ ಮಾಹಿತಿ ನೀಡಿದರು.

ಐಡಿಎಸ್‌ಎಂಟಿ ಯೋಜನೆಯಡಿಯ ಮಳಿಗೆಗಳ ಬಾಡಿಗೆ ಹಣ ರೂ. 60 ಲಕ್ಷದಷ್ಟು ಸಂಗ್ರಹವಾಗಿದೆ ಎಂದು ಹೇಳುತ್ತೀರಿ. ಕೆರೆಯ ದಂಡೆಯ ಮೇಲೆ ನಿರ್ಮಿಸಿರುವ ಉದ್ಯಾನವನದಲ್ಲಿ ಜೂಜಾಟ, ಮದ್ಯಸೇವನೆ, ಗಾಂಜಾ ಸೇವನೆ ನಡೆಯುತ್ತಿದೆ. ಅದನ್ನು ತೆರವುಗೊಳಿಸಿ ಅಲ್ಲಿ ಮಳಿಗೆ ನಿರ್ಮಿಸಿ. ಇದರಿಂದ ಪುರಸಭೆಗೆ ಆದಾಯವಾದರೂ ಹೆಚ್ಚುತ್ತದೆ ಎಂದು ಇನ್ನೋರ್ವ ಸದಸ್ಯ ಸಚಿನ ಕೊಡತೆ ಆಗ್ರಹಿಸಿದರು. ಇದಕ್ಕೆ ಬಹುತೇಕ ಸದಸ್ಯರು ಒಪ್ಪಿಗೆ ಸೂಚಿಸಿದರು.

ಟೆಂಡರ್ ರದ್ದತಿಗೆ ಅನುಮೋದನೆ: ಬೀದಿ ದೀಪ ನಿರ್ವಹಣೆ ಗುತ್ತಿಗೆದಾರನಿಂದ ಸರಿಯಾಗಿ ಕೆಲಸವಾಗುತ್ತಿಲ್ಲ. ಆತ ಮೊಬೈಲ್ ಕರೆಗಳಿಗೂ ಸ್ಪಂದಿಸುವುದಿಲ್ಲ. ಆದ್ದರಿಂದ ಅವರ ಟೆಂಡರ್ ರದ್ದುಗೊಳಿಸುವಂತೆ ಆದಿನಾಥ ಸಪ್ತಸಾಗರ ಸಭೆಯಲ್ಲಿ ಮಂಡಿಸಿದರು. ಇದಕ್ಕೆ ಎಲ್ಲ ಸದಸ್ಯರು ಧ್ವನಿಗೂಡಿಸಿದ್ದರಿಂದ ಬೀದಿ ದೀಪ ನಿರ್ವಹಣೆ ಗುತ್ತಿಗೆದಾರನ ಟೆಂಡರ್ ರದ್ದತಿಗೆ ಠರಾವು ಮಾಡಲಾಯಿತು. ಹಾಲುಮತ ಸಮಾಜದವರ ಬಹುದಿನಗಳ ಬೇಡಿಕೆಯಾಗಿರುವ ಸಂಗೊಳ್ಳಿ ರಾಯಣ್ಣ ವೃತ್ತ ನಾಮಕರಣಕ್ಕೆ ಸಭೆಯಲ್ಲಿ ಅನುಮೋದನೆ ನೀಡಲಾಯಿತು.

ಧರಣಿ ಎಚ್ಚರಿಕೆ-ಮಟನ್ ಅಂಗಡಿಗಳನ್ನು ದುರಸ್ತಿ ಮಾಡಿ ಕೊಡಿ ಎಂದು ಅಧಿಕಾರಕ್ಕೆ ಬಂದಾಗಿನಿಂದ ಹೇಳುತ್ತಿದ್ದೇನೆ. ಯಾವೊಬ್ಬ ಅಧಿಕಾರಿಯೂ ಕ್ಯಾರೆ ಎನ್ನುತ್ತಿಲ್ಲ. ಇದರಿಂದ ಮಟನ್ ವ್ಯಾಪಾರಸ್ಥರಿಗೆ ತೀವ್ರ ತೊಂದರೆ ಆಗುತ್ತಿದೆ. ಕೂಡಲೇ ಮಟನ್ ಅಂಗಡಿಗಳನ್ನು ದುರಸ್ತಿ ಮಾಡಿಕೊಡಿ ಇಲ್ಲವೇ ಬೇರೆ ಕಡೆಗೆ ಮಳಿಗೆಗಳನ್ನು ನಿರ್ಮಿಸಿ ಕೊಡಬೇಕು ಎಂದು ಸದಸ್ಯ ಸಚಿನ ಕೊಡತೆ ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಬೇಡಿಕೆಗೆ ಸ್ಪಂದಿಸುವುದಾಗಿ ಭರವಸೆ ನೀಡಿದ ಮುಖ್ಯಾಧಿಕಾರಿ ಎಫ್. ಬಿ. ಗಿಡ್ಡಿ ಒಂದು ತಿಂಗಳ ಕಾಲಾವಕಾಶ ಕೇಳಿದರು. ತಿಂಗಳಲ್ಲಿ ಕ್ರಮ ಕೈಗೊಳ್ಳದಿದ್ದರೆ ಮಟನ್ ವ್ಯಾಪಾರಸ್ಥರ ಕುಟುಂಬಸ್ಥರೊಂದಿಗೆ ಪುರಸಭೆ ಮುಂದೆ ಧರಣಿ ನಡೆಸುವುದಾಗಿ ಎಚ್ಚರಿಕೆ ನೀಡಿದರು.

ಅನಾಹುತಕ್ಕೆ ನೀವೇ ಹೊಣೆ: ವಾರ್ಡ್ ನಂಬರ ನಾಲ್ಕರಲ್ಲಿ ವಿದ್ಯುತ್ ಕಂಬಗಳ ಅಳವಡಿಕೆ ಕಾಮಗಾರಿ ಅರ್ಧಕ್ಕೆ ನಿಂತಿದೆ. ವಿದ್ಯುತ್ ತಂತಿಗಳು ಜೋಕಾಲಿಯಂತೆ ಜೋತು ಬಿದ್ದಿವೆ. ಇದರಿಂದ ಅಲ್ಲಿನ ಜನರು ಜೀವ ಭಯದಲ್ಲಿ ಓಡಾಡುತ್ತಿದ್ದಾರೆ. ಈ ಬಗ್ಗೆ ಕ್ರಮ ಕೈಗೊಳ್ಳಲು ಸಾಕಷ್ಟು ಬಾರಿ ಹೇಳಿದರೂ ಕ್ರಮ ಕೈಗೊಳ್ಳುತ್ತಿಲ್ಲ. ಏನಾದರೂ ಅನಾಹುತ ಸಂಭವಿಸಿದರೆ ಪುರಸಭೆ ಅಧಿಕಾರಿಗಳೆ ನೇರ ಹೊಣೆ ಎಂದು ಸದಸ್ಯ ಕಾಶಿನಾಥ ರಾಠೋಡ ಎಚ್ಚರಿಕೆ ನೀಡಿದರು. ಚರಂಡಿಗಳನ್ನು ಸ್ವಚ್ಛಗೊಳಿಸುತ್ತಿಲ್ಲ. ತೆಗೆದ ಗಲೀಜು ಬೇಗನೆ ತೆಗೆದುಕೊಂಡು ಹೋಗುವುದಿಲ್ಲ. ಇದರಿಂದ ದೇವಸ್ಥಾನಕ್ಕೆ ಹೋಗುವ ಜನ ಮೂಗು ಮುಚ್ಚಿಕೊಂಡು ಹೋಗುವಂತಾಗುತ್ತಿದೆ ಎಂದು ಮಾಜಿ ಅಧ್ಯಕ್ಷೆ ಕುಸುಮಾಂಡಿನಿ ಬಾಬಗೊಂಡ ಆರೋಪಿಸಿದರು. ಸುರೇಶ ಕಬಾಡಗಿ, ಫೈಜುಲ್ಲಾ ಇನಾಂದಾರ, ಫಜಲ್ ಅತಾರಾವುತ್, ಮೌಲಾಅಲಿ ಚಿತ್ರಬಾನುಕೋಟೆ ಸೇರಿದಂತೆ ಇನ್ನೂ ಹಲವರು ಸಲಹೆ ಸೂಚನೆಗಳನ್ನು ನೀಡಿದರು. ಅಧ್ಯಕ್ಷೆ ಶಿಲ್ಪಾ ರೋಡಕರ ಅಧ್ಯಕ್ಷತೆ ವಹಿಸಿದ್ದರು. ಉಪಾಧ್ಯಕ್ಷೆ ನಸ್ರೀನ್ಬಾನು ನಗಾರ್ಜಿ, ಸ್ಥಾಯಿ ಸಮಿತಿ ಚೇರಮನ್ ಕುಮಾರ ಸರಿಕರ, ಕಚೇರಿ ವ್ಯವಸ್ಥಾಪಕ ಮಲ್ಲಿಕಾರ್ಜುನ ಬಿರಾದಾರ ಪಾಟೀಲ, ಸುರೇಶ ಹರಿಜನ ಇನ್ನಿತರರು ಉಪಸ್ಥಿತರಿದ್ದರು.

# ರಾಜ್ಯದಲ್ಲಿ ಮಾದರಿ ನಗರವಾಗಿ ವಿಜಯಪುರ ಅಭಿವೃದ್ಧಿ: ರಾಮನಗೌಡ

**ವಿಜಯಪುರ:** ನಗರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರು, ಲೋಕೋಪಯೋಗಿ ಇಲಾಖೆಯಿಂದ ಮಂಜೂರಿಸಿರುವ ರೂ.1.30 ಕೋಟಿ ಅನುದಾನದಲ್ಲಿ ನಗರದ ವಾರ್ಡ್ ನಂ.35 ರಲ್ಲಿ ಬರುವ ಮಹಾತ್ಮಾ ಗಾಂಧಿ ಕಾಲೊನಿಯ ಮುಖ್ಯ ರಸ್ತೆ ಹಾಗೂ ಆಂತರಿಕ ರಸ್ತೆ ಅಭಿವೃದ್ಧಿ ಪಡಿಸುವ ಕಾಮಗಾರಿಗೆ ಗುರುವಾರ ಭೂಮಿಪೂಜೆ ನೆರವೇರಿಸಲಾಯಿತು.



ನಗರದ ಮಹಾತ್ಮ ಗಾಂಧಿ ಕಾಲೊನಿಯ ಸಾಯಿಬಾಬಾ ದೇವಸ್ಥಾನ ಹತ್ತಿರ ನಡೆದ ಭೂಮಿಪೂಜಾ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿರ್ದೇಶಕ ರಾಮನಗೌಡ ಪಾಟೀಲ ಯತ್ನಾಳ ಅವರು, ನಗರದಲ್ಲಿ ಗುಣಮಟ್ಟದ ರಸ್ತೆಗಳು, ಚರಂಡಿಗಳ ನಿರ್ಮಾಣ, ಕಸ ವಿಲೇವಾರಿ, ಸಮುದಾಯ ಭವನಗಳು, ಅಂಗನವಾಡಿಗಳು, ಶಾಲಾ ಕೊಠಡಿಗಳ ನಿರ್ಮಾಣ, ಬೀದಿ ದೀಪಗಳ ಅಳವಡಿಕೆ ಹೀಗೆ ಸಾಕಷ್ಟು ಅಭಿವೃದ್ಧಿ ಕಾರ್ಯಗಳಾಗಿವೆ. ಉಳಿದಿರುವ ಸಣ್ಣಪುಟ್ಟ ಕಾಮಗಾರಿಗಳಿಗೂ ಕೂಡ ಶಾಸಕರು ಅನುದಾನ ತಂದು ಕಾಮಗಾರಿಗಳನ್ನು ಕೈಗೊಳ್ಳುತ್ತಿದ್ದಾರೆ. ರಾಜ್ಯದಲ್ಲಿ ಮಾದರಿ ನಗರವಾಗಿ ವಿಜಯಪುರ ಅಭಿವೃದ್ಧಿಗೊಂಡಿದೆ ಎಂದು ತಿಳಿಸಿದರು.

ಮಹಾನಗರ ಪಾಲಿಕೆ ಮೇಯರ್ ಎಂ.ಎಸ್.ಕರಡಿ, ಸದಸ್ಯ ರಾಜಶೇಖರ ಕುರಿಯವರ, ಮುಖಂಡರಾದ ಬಸವರಾಜ ಮಧಬಾವಿ, ಗೋಪಾಲ ಮಲಘಾಣ, ಆರ್.ಎಂ. ನಾಗಾವಿ, ಮಹೇಶ ಗುಡ್ಯಾಳ, ಸಾಗರ ಪತಂಗೆ, ಛಾಯಾ ಮಸಿ, ಆರ್.ಡಿ. ಸಾರವಾಡ, ಉಮಾ ಹೂಲಿ, ಸತೀಶ ಬಿರಾದಾರ, ಪ್ರಶಾಂತ ಕಾಪಾಳೆ ಮತ್ತಿತರರು ಉಪಸ್ಥಿತರಿದ್ದರು.

# ಅಂಗನವಾಡಿ, ವಸತಿ ಶಾಲೆಗಳಿಗೆ ಬಾಲ ವಿಕಾಸ ಅಕಾಡೆಮಿ ಅಧ್ಯಕ್ಷ ಸಂಗಮೇಶ ಬಬಲೇಶ್ವರ ಭೇಟಿ, ಪರಿಶೀಲನೆ

**ವಿಜಯಪುರ :** ಧಾರವಾಡ ಬಾಲ ವಿಕಾಸ ಅಕಾಡೆಮಿ ಅಧ್ಯಕ್ಷ ಸಂಗಮೇಶ ಬಬಲೇಶ್ವರ ಅವರು ವಿಜಯಪುರ ನಗರದ ಅಂಗನವಾಡಿ ಕೇಂದ್ರ, ವಿವಿಧ ವಸತಿ ನಿಲಯ,

ವಸತಿ ಶಾಲೆ ಹಾಗೂ ಪ್ರಾಥಮಿಕ ಶಾಲೆಗಳಿಗೆ ಅಧಿಕಾರಿಗಳೊಂದಿಗೆ ಗುರುವಾರ ಭೇಟಿ ನೀಡಿ ಅಲ್ಲಿರುವ ವ್ಯವಸ್ಥೆ ಹಾಗೂ ಕಾರ್ಯ ವೈಖರಿಯ ಕುರಿತು ಪರಿಶೀಲನೆ ನಡೆಸಿ,ಅಗತ್ಯ ಸಲಹೆ ಸೂಚನೆ ನೀಡಿದರು.



ಎಸ್ ಎಸ್ ಎಲ್ ಸಿಯ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದ ಅವರು, ಪರೀಕ್ಷೆ ,ಪರೀಕ್ಷಾ ಸಿದ್ಧತೆ ಇತ್ಯಾದಿ ವಿಷಯ ಕುರಿತಾಗಿ ಮಾತನಾಡಿದರು. ಎಸ್ ಎಸ್ ಎಲ್ ಸಿ ವಿದ್ಯಾರ್ಥಿ ಜೀವನದ ಶೈಕ್ಷಣಿಕ ಹಂತದ ಘಟ್ಟವಾಗಿದೆ. ದಿನನಿತ್ಯ ಶಾಲೆಗೆ ಹಾಜರಾಗಿ,ಪಾಠ ಬೋಧನೆಯನ್ನು ನಿರಂತರತೆಯೊಂದಿಗೆ ಕೇಳುವುದರಿಂದ ವಿಷಯ ಕರಗತವಾಗಿ, ಮನನವಾಗುತ್ತದೆ ಓದಿನೊಂದಿಗೆ ಬಿಡುವು ಮಾಡಿಕೊಂಡು ಆಟೋಟಗಳಲ್ಲಿ ಭಾಗವಹಿಸುವುದರಿಂದ ಮಾನಸಿಕ ಸದೃಢತೆ ಸಾಧಿಸಲು ಸಾಧ್ಯವಾಗುತ್ತದೆ. ಆ ನಿಟ್ಟಿನಲ್ಲಿ ಕ್ರಿಯಾಶೀಲತೆಯನ್ನು ಮೈಗೂಡಿಸಿಕೊಳ್ಳುವ ಮೂಲಕ ಚಟುವಟಿಕೆಯಿಂದಿರಬೇಕು ಎಂದು ಹೇಳಿದರು.

ಓದಿದ ವಿಷಯ ಮನನ ಮಾಡಿಕೊಂಡು, ಬಹಳಷ್ಟು ವಿಷಯಗಳ ಅರಿತುಕೊಳ್ಳಬೇಕು. ಜೀವನದಲ್ಲಿ ಗುರಿ ನಿಗದಿಪಡಿಸಿಕೊಂಡು ಸತತ ಪರಿಶ್ರಮದ ಮೂಲಕ ಸಾಧನೆ ಮಾಡಬೇಕು ಎಂದು ಹೇಳಿದರು.

ಅಂಗನವಾಡಿ, ವಸತಿ ಶಾಲೆ ಹಾಗೂ ವಸತಿ ನಿಲಯಗಳಲ್ಲಿ ಮಕ್ಕಳಿಗೆ ದೈನಂದಿನ ಮೆನುವಿನಂತೆ ಗುಣಮಟ್ಟದ ಆಹಾರ ವಿತರಿಸುವಂತೆ ಹಾಗೂ ಮಕ್ಕಳ ಸ್ನೇಹಿಯಾದ ವಾತಾವರಣ ನಿರ್ಮಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು. ಅನಿರೀಕ್ಷಿತವಾಗಿ ಅಂಗನವಾಡಿ ಮತ್ತು ಶಾಲೆಗಳಿಗೆ ಭೇಟಿ ನೀಡಿ, ಈ ಸಂದರ್ಭದಲ್ಲಿ ಕಂಡುಬಂದ ನ್ಯೂನ್ಯತೆಗಳ ಪಟ್ಟಿ ಮಾಡಿ ಸರಿಪಡಿಸುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

ಮಕ್ಕಳ ಹಿತ ದೃಷ್ಟಿಯಿಂದ ತ್ವರಿತ ಕ್ರಮ ಕೈಗೊಳ್ಳುವಂತೆ ಸಂಬಂಧಿಸಿದ ಆಧಿಕಾರಿಗಳಿಗೆ ತಿಳಿಸಿದರು. ಸ್ವಚ್ಛತೆ ಹಾಗೂ ಶುಚಿತ್ವಕ್ಕೆ ಆದ್ಯತೆ ನೀಡಬೇಕು.ವಸತಿ ಶಾಲೆ ಹಾಗೂ ವಸತಿ ನಿಲಯಗಳಲ್ಲಿ ಅಗತ್ಯ ಮೂಲಭೂತಸೌಲಭ್ಯಗಳುಸಮರ್ಪಕವಾಗಿ ಇರುವಂತೆ ನೋಡಿಕೊಳ್ಳಬೇಕು ಎಂದು ಅವರು ಸೂಚಿಸಿದರು.

ಈ ಸಂದರ್ಭದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ಕೆ.ಕೆ ಚವ್ಹಾಣ, ವಿಜಯಪುರ ತಹಸೀಲ್ದಾರ ಪ್ರಶಾಂತ ಚನಗೊಂಡ, ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ಮಹೇಶ ಪೊ?ತದಾರ,ಹಿಂದುಳಿದವರ್ಗಗಳಕಲ್ಯಾಣ ಇಲಾಖೆಯ ಉಪ ನಿರ್ದೇಶಕ ಪುಂಡಲಿಕ ಮಾನವರ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಅಧಿಕಾರಿ ಪ್ರಶಾಂತ ಪೂಜಾರಿ, ಶಾಲಾ ಶಿಕ್ಷಣ ಇಲಾಖೆಯ ದಳವಾಯಿ ಹಾಗೂ ಜಿಲ್ಲಾಮಟ್ಟದ ಹಾಗೂ ತಾಲೂಕ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

# ಗಬ್ಬೆದ್ದು ನಾರುತ್ತಿರುವ ಗಟಾರ ನೀರು ಅಧಿಕಾರಿಗಳ ನಿರ್ಲಕ್ಷ್ಯ: ಮಹಾಂತೇಶ ಹಾದಿಮನಿ ಆಕ್ರೋಶ

**ಹೂ ಹಿಪ್ಪರಗಿ :** ಬಸವನ ಬಾಗೇವಾಡಿ ತಾಲ್ಲೂಕಿನ ಕಾಮನಕೇರಿ ಗ್ರಾಮದಲ್ಲಿ ಮುಖ್ಯ ರಸ್ತೆ ಮೇಲೆ ಚರಂಡಿ ಗಲೀಜು ನೀರು ಸಂಗ್ರಹವಾಗಿ ದುರ್ವಾಸನೆ ಹರಡುತ್ತಿದ್ದು, ಅವ್ಯವಸ್ಥೆ ತಾಣವಾಗಿ ಮಾರ್ಪಟ್ಟಿದೆ.

ಡಾಕ್ಟರ್ ಬಾಬಾ ಸಾಹೇಬ್ ಅಂಬೇಡ್ಕರ್ ವೃತ್ತದ ಪಕ್ಕದಲ್ಲೇ ತಿಪ್ಪೆಗುಂಡಿಗಳು, ಚರಂಡಿ ನೀರು ನಿಂತಿದ್ದು.ಮುಂದೆ ಹರಿಯದಂತ ಸ್ಥಿತಿ ಇದೆ. ರಸ್ತೆಗಿಂತ ಕೆಳಭಾಗದಲ್ಲಿ ಚರಂಡಿ ಇದ್ದು, ಚರಂಡಿ ನೀರು ಸರಾಗವಾಗಿ ಮುಂದೆ ಹರಿಯದೇ ಒಂದೆಡೆ ಸಂಗ್ರಹವಾಗಿ ನಿಲ್ಲುತ್ತಿದೆ. ಇದು ಸುಮಾರು ತಿಂಗಳಿಂದ ಈ ರೀತಿ ಸಮಸ್ಯೆ ಕಾಮನಕೇರಿ ಗ್ರಾಮದಲ್ಲಿ ಇದ್ದರೂ. ಯಾರೊಬ್ಬರೂ ಅಧಿಕಾರಿಗಳು ಸರಿಯಾಗಿ ಸ್ಪಂದಿಸುತ್ತಿಲ್ಲ ಎಂದು ಭೀಮ್ ಆರ್ಮಿ ಸಂವಿಧಾನ ರಕ್ಷಕ ದಳ ರಾಜ್ಯ ಸಂಘಟನಾ ಸಂಚಾಲಕರಾದ ಮಹಾಂತೇಶ ಹಾದಿಮನಿ ಮತ್ತು ಅಲ್ಲಿನ ಸ್ಥಳೀಯರ ಬೇಸರ ವ್ಯಕ್ತಪಡಿಸಿದ್ದಾರೆ.

ಜೋರಾಗಿ ಮಳೆ ಬಂದಂಥ ಸಂದರ್ಭದಲ್ಲಿ ಚರಂಡಿಯ ಗಲೀಜು ನೀರು ಮನೆಗಳ ಮುಂದೆ ಬಂದು ನಿಲ್ಲುತ್ತದೆ. ಜನರು ಗಲೀಜು ನೀರಿನ ಮೇಲೆಯೇ ನಡೆದಾಡಬೇಕಾಗಿದೆ. ಸದ್ಯ ನಿಜವ್ವ ಹನಮಂತ ಸಾತಿಹಾಳ ರವರ ಮನೆಯ ಮುಂದೆ ನೀರು ನಿಂತುಕೊಂಡಿದ್ದು, ಮಳೆಯಾದ ಸಂರ್ಭದಲ್ಲಿ ಮನೆಯ ಒಳಗೆ ನೀರು ನುಗ್ಗುತ್ತವೆ.ಎಂದು ಆ ಮಹಿಳೆ ಅಧಿಕಾರಿಗಳಿಗೆ ಹಿಡಿ ಶಾಪ ಹಾಕುತ್ತಿದ್ದಾಳೆ.ಈ ಗಲೀಜು ನೀರಿನಿಂದ ಸೊಳ್ಳೆಗಳ ಕಾಟ ಹೆಚ್ಚಾಗಿದ್ದು.ಮಲೇರಿಯಾ ಡೆಂಗೂ, ರೋಗ ಹರಡುವ ಸಾಧ್ಯತೆ ಇದೆ.

ಹಲವು ತಿಂಗಳಿಂದ ಗಲೀಜಿನಿಂದ ಕೂಡಿರುವ ಚರಂಡಿ ನೀರಿನ ಮಧ್ಯೆ ನಡೆದಾಡುವಂಥ ದುಸ್ಥಿತಿ ನಿರ್ವಣವಾಗಿದೆ. ಈ ಬಗ್ಗೆ ಗ್ರಾಮ ಪಂಚಾಯತಿ, ಮತ್ತು ತಾಲ್ಲೂಕ ಪಂಚಾಯತ್ ಅಧಿಕಾರಿಗಳಿಗೆ ತಿಳಿಸಿದರು ಸಮಸ್ಯೆ ಬಗೆಹರಿಸುವ ಕೆಲಸವಾಗಿಲ್ಲ. ಚರಂಡಿ ನೀರು ನಿಲ್ಲದಂತೆ ಮುಂದೆ ಸರಿಯಾಗಿ ಹರಿದು ಹೋಗಬೇಕು. ಸ್ವಚ್ಛತೆಗೆ ಆದ್ಯತೆ ನೀಡುವ ನಿಟ್ಟಿನಲ್ಲಿ ಅಧಿಕಾರಿಗಳು ಕೆಲಸ

ಮಾಡಬೇಕು. ಒಂದು ವೇಳೆ ಇದರ ಬಗ್ಗೆ ನಿರ್ಲಕ್ಷ್ಯ ವಹಿಸಿದಲ್ಲಿ ಸಂಬಂಧ ಪಟ್ಟ ಕಾರ್ಯಲಯಗಳ ಬಿಗ್ ಮುದ್ರೆ ಹಾಕಿ ಹೋರಾಟ ಮಾಡಲಾಗುವುದು ಎಂದು ಭೀಮ್ ಆರ್ಮಿ ಸಂವಿಧಾನ ರಕ್ಷಕ ದಳ ರಾಜ್ಯ ಸಂಘಟನಾ ಸಂಚಾಲಕರಾದ ಮಹಾಂತೇಶ ಹಾದಿಮನಿ ಎಚ್ಚರಿಕೆ ನೀಡಿದ್ದಾರೆ. ಈ ಸಂದರ್ಭದಲ್ಲಿ ಸಮಾಜ ಸೇವಕರಾದ ಎಸ್. ಎಸ್. ಕೆಂಪೇಗೌಡ್ರು, ಸ್ಥಳೀಯರಾದ ಗೊಲ್ಲಾಳಪ್ಪ ಹಾದಿಮನಿ,ಯಲ್ಲಪ್ಪ ದೊಡಮನಿ,ಮಲಕಪ್ಪ ದೊಡಮನಿ, ಚಂದ್ರಾಮ ನಾಯ್ಕ,ಭೀಮಣ್ಣನಾಯ್ಕ,ಲಕ್ಷ್ಮಣ್ಣಹಾದಿಮನಿ,ಭೀಮ್ ಆರ್ಮಿ ಸಂವಿಧಾನ ರಕ್ಷಕ ದಳ ಸಂಘಟನೆಯವರು ಒತ್ತಾಯಿಸಿದ್ದಾರೆ.

# ಬಸವರಾಜ ಜಾಲವಾದಿ ಗ್ರಾಮದ ಕೀರ್ತಿ ಹೆಚ್ಚಿಸಿದ್ದಾರೆ

**ಕೊಲ್ಹಾರ :** ರಾಜ್ಯ ಪ್ರಶಸ್ತಿ ಪುರಸ್ಕೃತ ಉಪನ್ಯಾಸಕರಾದ

ಪೊರ; ಬಸವರಾಜ ಜಾಲವಾದಿಯವರು ನಮ್ಮೂರಿನ ಹೆಮ್ಮೆ.ರಾಜ್ಯಮಟ್ಟದ ಉತ್ತಮ ಉಪನ್ಯಾಸಕ ಪ್ರಶಸ್ತಿ ಪುರಸ್ಕೃತರಾಗುವುದರೊಂದಿಗೆ ಗ್ರಾಮದ ಮತ್ತು ನಮ್ಮ ಕೀರ್ತಿಯನ್ನು ಹೆಚ್ಚಿಸಿದ್ದಾರೆ ಎಂದು ಜ್ಞಾನಭಾರತಿ ಹಿರಿಯ ಪ್ರಾಥಮಿಕ ಶಾಲೆಯ ಅಧ್ಯಕ್ಷ ಸೋಮು ಸಾಗರ್ ಹೇಳಿದರು



ಅವರು ಜ್ಞಾನಭಾರತಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಇಂದು ಏರ್ಪಡಿಸಿದ ರಾಜ್ಯ ಉತ್ತಮ ಉಪನ್ಯಾಸಕ ಪ್ರಶಸ್ತಿ ಪುರಸ್ಕೃತ ಪೊ?ರ;ಬಸವರಾಜಜಾಲವಾದಿಯವರನ್ನು ಸನ್ಮಾನ ಕಾರ್ಯಕ್ರಮದ ಅಧ್ಯಕ್ಷರಾಗಿ ಮಾತನಾಡುತ್ತಿದ್ದರು.

ಇಂತಹ ವ್ಯಕ್ತಿಗಳಿಗೆ ಪ್ರಶಸ್ತಿ ಕೊಟ್ಟಾಗ ಅದು ತನ್ನ ಮೌಲ್ಯವನ್ನು ಹೆಚ್ಚಿಸಿಕೊಳ್ಳುತ್ತದೆ ಏಕೆಂದರೆ ಹಲವಾರು ವರ್ಷಗಳಿಂದ ನಮ್ಮೂರಿನ ವಿದ್ಯಾರ್ಥಿಗಳಿಗೆ ಅವರು ಕೈಕೊಂಡಿರುವ ನವೀನ ಪ್ರಯೋಗಗಳು ಹಾಗೂ ಅವರ ಸಾರ್ವಜನಿಕ ಸಂಬಂಧ ಅನುಕರಣೆಅನುಕರಣೀಯುವಾಗಿದೆ ಎಂದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಪೊ?ರ ಬಸವರಾಜ ಜಾಲವಾದಿಯವರು ಅಧ್ಯಾಪಕರು ಮೊಬೈಲ್ ಬಿಡಿ ಪುಸ್ತಕ ಕೈಯಲ್ಲಿ ಹಿಡಿ ಎಂಬುದನ್ನ ವಿದ್ಯಾರ್ಥಿಗಳಿಗೆ ಒತ್ತಿ ಒತ್ತಿ ಹೇಳಬೇಕಿದೆ . ವಿದ್ಯಾರ್ಥಿಗಳಾದವರು ಐದುವರ್ಷ ಕಷ್ಟಪಟ್ಟು ಓದಿದಾಗ ಐವತ್ತು ವರ್ಷ ಸುಖವಾಗಿರುತ್ತೀರಿ.ಸುಖವನ್ನು ಅಪೇಕ್ಷಿಸುವವನಿಗೆ ವಿದ್ಯೆ ಎಲ್ಲಿಯದೆಂದರು.

ಅತಿಥಿ ಸ್ಥಾನದಿಂದ ಮಾತನಾಡಿದ ನಿವೃತ್ತ ಪಶು ವೈದ್ಯಾಧಿಕಾರಿ ಬಿ.ಬಿ ಮುತ್ತತ್ತಿ ಗ್ರಾಮೀಣ ಮಟ್ಟದಲ್ಲಿ ವಿದ್ಯಾರ್ಥಿಗಳ ಬೆಳವಣಿಗೆಗೋಸ್ಕರ ಅವರು ತೆಗೆದುಕೊಂಡಿರುವ ನವೀನ ಪ್ರಯೋಗಗಳು ಶಿಕ್ಷಣ ಪ್ರೇಮಿಗಳ ಹಾಗೂ ಗ್ರಾಮದವರ ಮನ ಸೆಳೆದು ಯಶಸ್ವಿಯಾದುದರ ಪರಿಣಾಮವೇ ಅವರಿಗೆ ಈ ಪ್ರಶಸ್ತಿ ದಕ್ಕಿದೆ ಅದು ನಮ್ಮೂರಿನ ಪುಣ್ಯ ಎಂದು ಹೇಳಿದರು.

ಪದವಿಪೂರ್ವ ಕಾಲೇಜಿನ ಪ್ರಾಚಾರ್ಯ ಖುಷಬ್ ಲಮಾಣಿ ಮಾತನಾಡಿ ಸಮಾರಂಭದ ಮುಖ್ಯ ಉದ್ದೇಶ ಸಮಾಜದ ಪ್ರಗತಿಗೆ ಹಾಗೂ ಶೈಕ್ಷಣಿಕ ಅಭಿವೃದ್ಧಿಗೆ ಕಾರಣರಾದ ಇಂಥವರನ್ನು ಸನ್ಮಾನಿಸುವುದೇ

ನಮ್ಮ ಸೌಭಾಗ್ಯ ಇಂಥವರಿಗೆ ಪ್ರಶಸ್ತಿ ನೀಡುವುದರಿಂದ ಪ್ರಶಸ್ತಿ ತನ್ನ ಗೌರವವನ್ನು ಹೆಚ್ಚಿಸಿಕೊಳ್ಳುತ್ತದೆ ಎಂದರು.

ವೇದಿಕೆಯ ಮೇಲೆ ಸೀಮಾ ಹರಿಕಾಂತ್ರಿ, ಶ್ರೀದೇವಿ ಪಡಸಲಗಿ ಸುರೇಶ್ ಜಾದವ್, ಸುಪ್ರಿಯಾ ಕೋಟ್ಯಾಳ, ಸಂಗಪ್ಪ ಪೂಜಾರಿ, ರಮೇಶ್ ಮಂಕಣಿ,ಶೀತಲಾ ಗೌಡ, ಪ್ರವೀಣ ರಾಠೋಡ್ ರವಿ ಕರಿಯಣ್ಣನವರ್, ವರ್ಮಿರಾ ಗೌಡ,ಅಪೂರ್ವ ಕೆ. ಆರ್ ಹಾಜರಿದ್ದರು.

# ಸಮಾಜ ಸುಧಾರಣೆಗೆ ಶಿಕ್ಷಕರ ಸೇವೆ ಅಗತ್ಯ: ನಿರಾಣಿ

**ಜಮಖಂಡಿ :** ವಿದ್ಯಾರ್ಥಿಗಳ ಸರ್ವೋತೋಮುಖ ಅಭಿವೃದ್ಧಿಗೆ ಮತ್ತು ಸಮಾಜದ ಸುಧಾರಣೆಗೆ ಶ್ರಮಿಸುತ್ತಿರುವ ಶಿಕ್ಷಕರ ಸೇವೆ ಅತ್ಯಮೂಲ್ಯವಾಗಿದೆ. ಮಕ್ಕಳನ್ನು ಶ್ರೇಷ್ಠ ವ್ಯಕ್ತಿಗಳನ್ನಾಗಿ ನಿರ್ಮಾಣ ಮಾಡುವಲ್ಲಿ ಶಿಕ್ಷಕರ ಕೊಡುಗೆ ಅಮೋಘವಾಗಿದೆ ಎಂದು ಎಂ.ಆರ್.ಎನ್. ಫೌಂಡೇಶನ್ ನಿರ್ದೇಶಕ ಸಂಗಮೇಶ ನಿರಾಣಿ ಹೇಳಿದರು.



ನಗರದ ತಾಲೂಕಾ ಪಂಚಾಯತ ಸಭಾ ಭವನದಲ್ಲಿ ಲಯನ್ಸ ಸಂಸ್ಥೆ ಹಮ್ಮಿಕೊಂಡಿದ್ದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮದಲ್ಲಿ ಡಾ. ಸರ್ವಪಲ್ಲಿರಾಧಾಕೃಷ್ಣನ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಮಾತನಾಡಿದರು.

ಶಿಕ್ಷಣ ಕ್ಷೇತ್ರದಲ್ಲಿ ಅನುಪಮ ಸೇವೆ ಸಲ್ಲಿಸಿದ ಡಾ. ಸಿದ್ದೇಶ್ವರ ಕಮತಿ, ಚಂದ್ರಕಾಂತ ಗಂಗಾಧರ, ಸುರೇಖಾ ಉಪ್ಪಲದಿನ್ನಿ, ಧನಂಜಯ ಪಾಟೀಲ, ಭೀಮಾಬಾಯಿ ಮಾಳಶೆಟ್ಟಿ, ನಿವೃತ್ತ ಶಿಕ್ಷಕ ಎಸ್. ಎಸ್. ಹೂಲಿ ಅವರನ್ನು ಸನ್ಮಾನಿಸಲಾಯಿತು.

ವೇದಿಕೆಯಲ್ಲಿ ನಾಡೋಜ ಡಾ. ಎಚ್. ಜಿ. ದಡ್ಡಿ, ಡಾ. ರಂಗನಾಥ ಸೋನವಾಲ್ಕರ, ಖಜಾಂಚಿ ರಮೇಶ ಕೋರಿ, ಎಚ್. ಆರ್. ಮಹಾರಡ್ಡಿ, ನಾಗೇಶ ಚಾಳಸೆ, ರಾಜೇಂದ್ರ ನಾಯಕ, ಮಹಾದೇವ ಅನಂತಪೂರ, ರಮೇಶ ಯಾದವಾಡ, ಸಂಗಮೇಶ ಕೌಜಲಗಿ, ಪ್ರವೀಣ ಮೈಗೂರ, ಪ್ರಭು ಜನವಾಡ, ರೂಪಶ್ರೀ ಕೋರಿ, ರಾಜಶೇಖರ ಅಕ್ಕಿ, ಚಿನ್ಮಯ ಜಿರಲಿ, ವಿನೋದ ದೇಶಪಾಂಡೆ, ಶಿವಲಿಂಗ ಬಾಗಲಕೋಟ, ಬಸಮ್ಮಾ ಬಾಗೋಜಿ ಪಾಲ್ಗೊಂಡಿದ್ದರು.

# ಶಂಕರ ಅಳ್ಳೊಳ್ಳಿ ಮೇಲೆ ಹಲ್ಲೆ: ಐವರು ಆರೋಪಿಗಳ ಬಂಧನ

**ಕಲಬುರಗಿ :** ಶಹಾಬಾದ ನಗರ ಪೊಲೀಸ್ ಠಾಣೆ ವ್ಯಾಪ್ತಿಯ ಭಂಕೂರ ಗ್ರಾಮದ ಐನಾಪುರ ದಾಬಾ ಬಳಿ ಶಂಕರ ತಂದೆ ಸುಭಾಷ ಅಳ್ಳೊಳ್ಳಿ ಮೇಲೆ ನಡೆದ ಹಲ್ಲೆ ಮತ್ತು ಕೊಲೆಯತ್ನ ಪ್ರಕರಣಕ್ಕೆ ಸಂಬಂಧಿಸಿದಂತೆ ಐವರು ಆರೋಪಿಗಳನ್ನು ಬಂಧಿಸುವಲ್ಲಿ ಪೊಲೀಸರು ಯಶಸ್ವಿಯಾಗಿದ್ದಾರೆ.



ಪ್ರಕರಣ ನಡೆದ 24 ಗಂಟೆಗಳಲ್ಲಿ ಕಲಬುರಗಿಯ ರಾಜಾಪುರದ ಶಂಭು ಅಲಿಯಾಸ್ ಟೆಕ್ಕಿ ತಂದೆ ಅಶೋಕ ದೊಡ್ಡಮನಿ, ಹೌಸಿಂಗ್ ಬೋರ್ಡ್ ಕಾಲೋನಿಯ ಗಣೇಶ ನಗರದ ಮಲ್ಲಿಕಾರ್ಜುನ ತಂದೆ ರೇವಣಸಿದ್ದಪ್ಪ ಮೇಲಿನಕೇರಿ, ಶಹಾಬಾದ ಸ್ಟೇಷನ್ ತಾಂಡಾದ ವಿಕ್ರಮ್ ಅಲಿಯಾಸ್ ವಿಕ್ಕಿ ತಂದೆ ರಾಜು ನಾಯಕ, ಕಲಬುರಗಿಯ ಹಾಗರಗಾ ರಸ್ತೆಯ ರಾಮಜಿ ನಗರದ ಬಸವರಾಜ ತಂದೆ ರವಿ ಶಂಕರಕೇರಿ, ರಾಣೇಶಪೀರ್ ದರ್ಗಾ ಬಳಿಯ ಡಬರಾಬಾದನ ಸುನೀಲ ತಂದೆ ಸೂರ್ಯಕಾಂತ ಚಿತಲಿ ಎಂಬುವವರನ್ನು ಬಂಧಿಸಿ ಕೃತ್ಯಕ್ಕೆ ಬಳಸಿದ ಬುಲೆರೋ ವಾಹನ, ಎರಡು ತಲ್ವಾರ ಹಾಗೂ ಕೊಡಲಿಯನ್ನು ಜಪ್ತಿ ಮಾಡಿಕೊಂಡು ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಹಳೆ ವೈಷಮ್ಯದ ಹಿನ್ನೆಲೆಯಲ್ಲಿ ಸೆ.11 ರಂದು 6.45ರ ಸುಮಾರಿಗೆ ಭಂಕೂರ ಗ್ರಾಮದ ಐನಾಪುರ ದಾಬಾ ಬಳಿ 5-6 ಜನರು ಶಂಕರ ಅಳ್ಳೊಳ್ಳಿ ತಲ್ವಾರ ಮತ್ತು ಕೊಡಲಿಯಿಂದ ಹಲ್ಲೆ ಮಾಡಿ ರಕ್ತಗಾಯ ಪಡಿಸಿ ಪಿಸ್ತೂಲ್‌ದಿಂದ ಗುಂಡು ಹಾರಿಸಿ ಕೊಲೆ ಮಾಡಲು ಯತ್ನಿಸಿದ್ದರು. ಈ ಸಂಬಂಧ ಶಹಾಬಾದ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಹೆಚ್ಚುವರಿ ಎಸ್‌ಪಿ ಮಹೇಶ ಮೇಘಣ್ಣನವರ್, ಶಹಾಬಾದ ಉಪ-ವಿಭಾಗದ ಡಿಎಸ್‌ಪಿ ಶಂಕರಗೌಡ ಪಾಟೀಲ ಅವರ ಮಾರ್ಗದರ್ಶನದಲ್ಲಿ ಶಹಾಬಾದ ನಗರ ಪೊಲೀಸ್ ಠಾಣೆ ಪಿಐ ನಟರಾಜ ಲಾಡೆ ಅವರ ನೇತೃತ್ವದಲ್ಲಿ ಪಿಎಸ್‌ಐ ಚಂದ್ರಕಾಂತ, ಎಎಸ್‌ಐಗಳಾದ ಗುಂಡಪ್ಪ, ಮಲ್ಲಿಕಾರ್ಜುನ, ಉಪಳಪ್ಪ, ಸಿಬ್ಬಂದಿಗಳಾದ ನಾಗೇಂದ್ರ, ಮಲ್ಲಿಕಾರ್ಜುನ, ಬಲರಾಮ, ಸಂತೋಷ, ಹುಸೇನ್ ಪಾಷ ಅವರನ್ನು ಒಳಗೊಂಡ ತಂಡ ರಚಿಸಲಾಗಿತ್ತು.

ಈ ತಂಡ ತನಿಖೆ ನಡೆಸಿ ಹುಮನಾಬಾದ ಇಂಡಸ್ಟ್ರಿಯಲ್ ಏರಿಯಾದಲ್ಲಿ ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದೆ.

ಈ ಐವರು ಆರೋಪಿಗಳ ಮೇಲೆ ಕಲಬುರಗಿಯ ಅಶೋಕನಗರ, ವಿಶ್ವವಿದ್ಯಾಲಯ ಹಾಗೂ ವಾಡಿ ರೈಲ್ವೆ ಪೊಲೀಸ್ ಠಾಣೆಗಳಲ್ಲಿ ಕೊಲೆ ಮತ್ತು ಕೊಲೆಯತ್ನ ಪ್ರಕರಣಗಳು ದಾಖಲಾಗಿವೆ. ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿರುವ ಪೊಲೀಸ್ ಅಧಿಕಾರಿಗಳು ಮತ್ತು ಶಹಾಬಾದ ನಗರ ಠಾಣೆ-ಯ ತಂಡದ ಕಾರ್ಯವನ್ನು ಎಸ್‌ಪಿ ಅಡ್ಡೂರು ಶ್ರೀನಿವಾಸಲು ಅವರು ಶ್ಲಾಘಿಸಿದ್ದಾರೆ.

# ಪ್ರಜಾಪ್ರಭುತ್ವವು ನಾಗರಿಕರ ಹಕ್ಕು ಗೌರವಿಸುವ ವ್ಯವಸ್ಥೆಯಾಗಿದೆ

**ಜಮಖಂಡಿ:** ಇಲ್ಲಿಯ ಸರಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು ಹಾಗೂ ಸ್ನಾತಕೋತ್ತರ ಕೇಂದ್ರದ ಆಶ್ರಯದಲ್ಲಿ ಸಪ್ಟೆಂಬರ 11 ರಂದು ರಾಜ್ಯಶಾಸ್ತ್ರ ವಿಭಾಗ ಹಾಗೂ ಐ.ಕ್ಯೂ.ಎ.ಸಿ. ಸಹಯೋಗದೊಂದಿಗೆ "ಪ್ರಜಾಪ್ರಭುತ್ವದ ಮಹತ್ವ ಮತ್ತು ಸವಾಲುಗಳು" ಎಂಬ ವಿಷಯದ ಮೇಲೆ ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.



ಈ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ್ದ ಝುಳಕಿಂ-ಮ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ರಾಜ್ಯಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಗುರನಗೌಡ ಪಾಟೀಲ ಅವರು ವಿದ್ಯಾರ್ಥಿನಿಯರನ್ನು ಕುರಿತು ಮಾತನಾಡುತ್ತ, "ಪ್ರಜಾಪ್ರಭುತ್ವವು ಜನರ ಶಕ್ತಿ ಮತ್ತು ಹಕ್ಕುಗಳನ್ನು ಗೌರವಿಸುವ ವ್ಯವಸ್ಥೆಯಾಗಿದೆ. ಜನರಿಗೆ ತಮ್ಮ ಪ್ರತಿನಿಧಿಗಳನ್ನು ಆಯ್ಕೆಮಾಡುವ ಹಕ್ಕು, ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವ ಅವಕಾಶ ಮತ್ತು ಸಮಾನತೆಯ ಭರವಸೆಯನ್ನು ಅದು ನೀಡುತ್ತದೆ. ಪ್ರಜಾಪ್ರಭುತ್ವದ ಮೂಲಕ ಪ್ರತಿ ವ್ಯಕ್ತಿಗೂ ತನ್ನ ಧ್ವನಿಯನ್ನು ಸಮಾಜ ಮತ್ತು ರಾಷ್ಟ್ರದ ಅಭಿವೃದ್ಧಿಗೆ ಬಳಸಿಕೊಳ್ಳುವ ಹಕ್ಕು ದೊರೆಯುತ್ತದೆ. ಇದು ನ್ಯಾಯ, ಸಮಾನತೆ ಮತ್ತು ಸ್ವಾತಂತ್ರ್ಯದ ಆಧಾರ ಸ್ತಂಭವಾಗಿ ದೇಶದ ಪ್ರಗತಿಗೆ ಬಲವಾಗುತ್ತದೆ. ಆದ-'ರೆ ಪ್ರಜಾಪ್ರಭುತ್ವವನ್ನು ಕಾಪಾಡುವುದು ಅಷ್ಟೊಂದು ಸುಲಭವಲ್ಲ. ಮತದಾರರ ನಿರ್ಲಕ್ಷ್ಯ, ಹಣ ಮತ್ತು ಅಕ್ರಮ ಪ್ರಭಾವ, ಭ್ರಷ್ಟಾಚಾರ ಹಾಗೂ ಸಾಮಾಜಿ-ಕ ಅಸಮಾನತೆಗಳು ಇದರ ದೊಡ್ಡ ಸವಾಲುಗಳಾಗಿವೆ. ಜನರಲ್ಲಿ ಜಾಗೃತಿ, ಶಿಕ್ಷಣ ಹಾಗೂ ಹೊಣೆಗಾರಿಕೆ ಬೆಳೆದಾಗ ಮಾತ್ರ ನಿಜವಾದ ಪ್ರಜಾಪ್ರಭುತ್ವ ಬಲಿಷ್ಠವಾಗುತ್ತದೆ. ಪ್ರಜಾಪ್ರಭುತ್ವವನ್ನು ಕೇವಲ ವ್ಯವಸ್ಥೆಯಾಗಿ ಅಲ್ಲ, ನಮ್ಮ ಜೀವನದ ಮೌಲ್ಯವಾಗಿ ಉಳಿಸಿಕೊಳ್ಳುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ಪ್ರಜಾಪ್ರಭುತ್ವವು ಕೇವಲ ಮತದಾನಕ್ಕಷ್ಟೇ ಸೀಮಿತವಾಗಿರುವುದಿಲ್ಲ. ಜನರ ಕಲ್ಯಾಣಕ್ಕಾಗಿ ಸರ್ಕಾರವು ಕೈಗೊಳ್ಳುವ ನೀತಿಗಳಲ್ಲಿ ಪಾರದರ್ಶಕತೆ ಇರಬೇಕು. ನಾಗರಿಕರಿಗೆ ಸಮಾನ ಅವಕಾಶಗಳು, ಶಿಕ್ಷಣ, ಆರೋಗ್ಯ ಮತ್ತು ಉದ್ಯೋಗ ದೊರೆಯುವಂತೆ ನೋಡಿಕೊಳ್ಳುವುದು ಪ್ರಜಾಪ್ರಭುತ್ವದ ಮುಖ್ಯ ಉದ್ದೇಶ. ಜನರ ಭಾಗವಹಿಸುವಿಕೆ ಹೆಚ್ಚಾದಂತೆ ಪ್ರಜಾಪ್ರಭುತ್ವವು ಇನ್ನಷ್ಟು ಬಲವಾಗುತ್ತದೆ.

ಇನ್ನೊಂದು ಕಡೆ, ಸಾಮಾಜಿಕ ಮಾಧ್ಯಮಗಳಲ್ಲಿ ಹರಡುವ ತಪ್ಪು ಮಾಹಿತಿ, ಜಾತಿ?ಧರ್ಮದ ಆಧಾರದ ಮೇಲೆ ನಡೆಯುವ ರಾಜಕೀಯ, ಮತ್ತು ಜನರ ನಿರ್ಲಕ್ಷ್ಯ ಪ್ರಜಾಪ್ರಭುತ್ವದ ಭವಿಷ್ಯವನ್ನು ದುರ್ಬಲಗೊಳಿಸುತ್ತವೆ. ಈ ಸವಾಲುಗಳನ್ನು ಎದುರಿಸಲು ನಾಗರಿಕರು ಜಾಗೃತರಾಗಿದ್ದು, ತಮ್ಮ ಹಕ್ಕುಗಳ ಜೊತೆಗೆ ಕರ್ತವ್ಯಗಳನ್ನು ಪಾಲಿಸಬೇಕು. ಜವಾಬ್ದಾರಿಯುತ ನಾಗ-ರಿಕರಾಗಿದ್ದರೆ ಮಾತ್ರ ಪ್ರಜಾಪ್ರಭುತ್ವ ತನ್ನ ನಿಜವಾದ ಶಕ್ತಿ ಮತ್ತು ಅರ್ಥವನ್ನು ತೋರಬಲ್ಲದು ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಮಹಾವಿದ್ಯಾಲಯದ ಪ್ರಾಂಶುಪಾಲೆ ಡಾ. ಸುನಂದಾ ಎಸ್. ಶಿರೂರ ಅವರು ಮಾತನಾಡುತ್ತಾ, "ಪ್ರಜಾಪ್ರಭುತ್ವವೆಂದರೆ ಜನರಿಗಾಗಿ,

ಜನರಿಂದಲೇ ನಡೆಯುವ ಆಡಳಿತ ಎಂಬ ಅರ್ಥ ಹೊಂದಿದೆ. ಈ ವ್ಯವಸ್ಥೆಯಲ್ಲಿ ಜನರ ಅಭಿಪ್ರಾಯವೇ ಮುಖ್ಯ. ಪ್ರತಿಯೊಬ್ಬ ನಾಗರಿಕನು ಸಮಾನ ಹಕ್ಕುಗಳನ್ನು ಅನುಭವಿಸುವಂತೆಯೇ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಬಹುದಾದ ಅವಕಾಶವೂ ಸಿಗುತ್ತದೆ.

ರಾಜಕೀಯ, ಸಾಮಾಜಿಕ, ಆರ್ಥಿಕ ಕ್ಷೇತ್ರಗಳಲ್ಲಿ ಸಮಾನ ಅವಕಾಶಗಳನ್ನು ಒದಗಿಸುವ ಶಕ್ತಿ ಪ್ರಜಾಪ್ರಭುತ್ವಕ್ಕಿದೆ.

ಇದು ನಾಗರಿಕರಲ್ಲಿ ಸ್ವಾತಂತ್ರ್ಯದ ಭಾವನೆ ಬೆಳೆಸುವುದಲ್ಲದೆ, ನ್ಯಾಯ ಹಾಗೂ ಬಾಂಧವ್ಯದ ಮೌಲ್ಯಗಳನ್ನು ಬಲಪಡಿಸುತ್ತದೆ. ಆದರೆ ಪ್ರಜಾಪ್ರಭುತ್ವವು ಸದಾ ಸವಾಲುಗಳಿಂದ ತುಂಬಿರುತ್ತದೆ. ಮತದಾರರ ನಿರ್ಲಕ್ಷ್ಯ, ಅಜ್ಞಾನದಿಂದ ಮತದಾನ,ಧರ್ಮ-ಜಾತಿಆಧಾರಿತರಾಜ-ಕೀಯ ಪ್ರಚಾರಗಳು, ಹಣದ ಪ್ರಭಾವ ಇವು ಪ್ರಜಾಪ್ರಭುತ್ವದ ಶುದ್ಧತೆಗೆ ಧಕ್ಕೆ ತರುತ್ತವೆ. ಸಮಾಜದಲ್ಲಿ ಅಸಮಾನತೆಗಳು ಹೆಚ್ಚಾದರೆ ಜನರ ಧ್ವನಿ ಕುಗ್ಗುತ್ತದೆ. ಪ್ರಜಾಪ್ರಭುತ್ವವನ್ನು ಬಲಪಡಿಸಲು ನಾಗರಿಕರಲ್ಲಿ ಜಾಗೃತಿ, ಶಿಕ್ಷಣ ಹಾಗೂ ಹೊಣೆಗಾರಿಕೆ ಬೆಳೆಸುವುದು ಅತ್ಯಗತ್ಯ. ಇದೇ ಸಮಯದಲ್ಲಿ ಪ್ರಜಾಪ್ರಭುತ್ವವು ಜನರಿಂದಲೇ ಬದುಕಿ ಬಲಗೊಳ್ಳುವುದರಿಂದ ಪ್ರತಿಯೊಬ್ಬ ನಾಗ-ರಿಕನು ಜವಾಬ್ದಾರಿಯುತವಾಗಿ ತನ್ನ ಕರ್ತವ್ಯಗಳನ್ನು ನಿಭಾಯಿಸಬೇಕು. ಕೇವಲ ಹಕ್ಕುಗಳನ್ನು ಕೇಳುವುದಷ್ಟೇ ಅಲ್ಲದೆ, ರಾಷ್ಟ್ರದ ಹಿತಕ್ಕಾಗಿ ಶಿಸ್ತು, ಕಾನೂನು ಪಾಲನೆ ಹಾಗೂ ಸಮಾಜಸೇವೆ ಕೂಡ ನಾಗರಿಕರಿಂದ ಆಗಬೇಕು. ಪ್ರಜಾಪ್ರಭುತ್ವದ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಂಡಾಗ ಮಾತ್ರ ಸಮಾಜವು ಸಮಾನತೆ, ನ್ಯಾಯ ಮತ್ತು ಶಾಂತಿಯುತ ದಾರಿಯಲ್ಲಿ ಸಾಗಬಹುದು. ಹೀಗಾಗಿ, ಪ್ರಜಾಪ್ರಭುತ್ವವು ಕೇವಲ ಆಡಳಿತ ವ್ಯವಸ್ಥೆಯಲ್ಲ; ಅದು ಬದುಕುವ ವಿಧಾನವೂ ಹೌದು. ಜನರು ಜಾಗೃತರಾಗಿದ್ದರೆ ಇದು ಬಲವಾಗುತ್ತದೆ. ನಿರ್ಲಕ್ಷ್ಯ ಮಾಡಿದರೆ ದುರ್ಬಲಗೊಳ್ಳುತ್ತದೆ. ಆದ್ದರಿಂದ ಪ್ರಜಾಪ್ರಭುತ್ವವನ್ನು ಕಾಪಾಡುವುದು ಪ್ರತಿಯೊಬ್ಬರ ಹೊಣೆಗಾರಿಕೆ, ಮತ್ತು ಅದು ದೇಶದ ಭವಿಷ್ಯವನ್ನು ರೂಪಿಸುವ ಶಕ್ತಿ ಹೊಂದಿದೆ ಎಂದು ಹೇಳಿದರು.

ಈ ವಿಶೇಷ ಉಪನ್ಯಾಸ ಕುರಿತು ವಿದ್ಯಾರ್ಥಿನಿಯರು ತಮ್ಮ ಅನಿಸಿಕೆಯನ್ನು ವ್ಯಕ್ತಪಡಿಸಿದರು. ಕುಮಾರಿ. ಲಕ್ಷ್ಮಿ ಬಬಲೇಶ್ವರ ನಿರೂಪಿಸಿದರು. ಕುಮಾರಿ ಸೀಮಾ ಅಜ್ಜಪ್ಪಗೋಳ ಪ್ರಾರ್ಥಿಸಿದರು. ಬಂದೇನವಾಜ ಕೊರಬು ಸ್ವಾಗತಿಸಿದರು. ಆರ್. ಎಚ್. ಹಳ್ಳಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಡಾ. ಎಂ. ಎಂ. ಮಂಟೂರ, ಡಾ. ಬಿ. ಎನ್. ಜಾಧವ, ಎ. ಎಸ್. ಪೂಜಾರಿ, ಡಾ. ಎಸ್. ಎನ್. ಮಣಕವಾಡ, ಆರ್. ಎಸ್. ಜಾಧವ ಉಪಸ್ಥಿತರಿದ್ದರು.




**ಕಲಬುರಗಿ :** ಜಿಲ್ಲೆಯಲ್ಲಿ ಅತಿವೃಷ್ಟಿಯಿಂದ ಬೆಳೆ ಹಾನಿಯಾದ ರೈತರಿಗೆ ತುರ್ತು ಪರಿಹಾರ ನೀಡುವಂತೆ ಆಗ್ರಹಿಸಿ ಅಖಿಲ ಭಾರತ ಕಿಸಾನ್ ಸಭಾ ಹಾಗೂ ಭಾರತ ಖೇತ್ ಮಜ್ದೂರ್ ಯೂನಿಯನ್ ಜಿಲ್ಲಾ ಸಮತಿ ನೇತೃತ್ವದಲ್ಲಿ ಜಿಲ್ಲಾಧಿಕಾರಿಗಳ ಕಚೇರಿ ಮುಂದೆ ಇಂದು ಪ್ರತಿಭಟನೆ ನಡೆಸಲಾಯಿತು. ಮೌಲಾ ಮುಲ್ಲಾ, ಭೀಮಾಶಂಕರ ಮಾಡಿಯಾಳ್, ಮಹ್ಮದ್ ಚೌಧರಿ, ಮಲ್ಲಿಕಾರ್ಜುನ ಕೆಲ್ಲೂರ, ಶರಣಬಸಪ್ಪ ಗಣಜಲಖೇಡ, ಮಹೇಶ ರಾಠೋಡ್ ಸೇರಿದಂತೆ ಮತ್ತಿತರರು ಪ್ರತಿಭಟನೆಯಲ್ಲಿ ಭಾವಹಿಸಿದ್ದರು.

"SIHI KAHI" Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State